ಟೋನಿ ಅಲಾಮೊ ಕ್ರೈಸ್ತ ಮಿನಿಸ್ಟ್ರಿಗಳು
ವಿಶ್ವ ಸುದ್ದಿಪತ್ರಿಕೆ
ಹೊಸ ಜೆರೂಸಲೆಮ್ ವಿಶ್ವಾದ್ಯಂತದ ಚರ್ಚುಗಳು
ಧರ್ಮಗುರು ಟೋನಿ ಅಲಾಮೊ | ಅಲಾಮೊ ಕ್ರೈಸ್ತ ರಾಷ್ಟ್ರ | ಸಂಪುಟ **18000**






ಪ್ಯಾಸ್ಟರ್ ಗಳಾದ ಟೋನಿ ಮತ್ತು ಸೂಸನ್ ಅಲಾಮೊ, ಕಾಯರ್, ಮತ್ತು ಆರ್ಕೆಸ್ಟ್ರ ತಮ್ಮ ಅಂತಾರಾಷ್ಟ್ರೀಯ ದೂರದರ್ಶನ ಕಾರ್ಯಕ್ರಮದಲ್ಲಿ ಚಿತ್ರೀಕರಣ 1973

# ಅಗಾಧ ದುಷ್ಟತನ

**ಟೋನಿ ಅಲಾಮೊ ಅವರಿಂದ**

**ಎಫೆಸದವರಿಗೆ 6:16 ಹೀಗೆಂದು ಹೇಳುತ್ತದೆ, “ಮತ್ತು ನಂಬಿಕೆಯೆಂಬ ಗುರಾಣಿಯನ್ನು ಹಿಡುಕೊಳ್ಳಿರಿ; ಅದರಿಂದ ನೀವು ಕೆಡುಕನ ಅಗ್ನಿಬಾಣಗಳನ್ನೆಲ್ಲಾ ಆರಿಸುವುದಕ್ಕೆ ಶಕ್ತರಾಗುವಿರಿ.” “ಕೆಡುಕರು” ಯಾರು? ಚರ್ಚಿನಲ್ಲಿರುವ ಜನರನ್ನು ನಾನು ಈ ಪ್ರಶ್ನೆ ಕೇಳಿದಾಗ ಅವರು “ಕೆಡುಕ” ಎಂದರೆ ಪಿಶಾಚಿ ಎಂದು ಹೇಳುತ್ತಾರೆ. ಪಿಶಾಚನ ಬಿಲಿಯಗಟ್ಟಲೆ ಅನುಯಾಯಿಗಳು ಮತ್ತು ಆರಾಧಕರು (ಕೆಡುಕರು) ಇದ್ದಾರೆ, ಮತ್ತು ದೇವರ ನೂರಾರು ಮಿಲಿಯಗಟ್ಟಲೆ ಆರಾಧಕರು ಮತ್ತು ಅನುಯಾಯಿಗಳು ಇದ್ದಾರೆ.**

ಮೊದಲನೆಯದಾಗಿ, “ಓವರ್ ವೆಲ್ಮಿಂಗ್” (ಅಗಾಧತೆ ಎಂಬ ಅರ್ಥನೀಡುವ ಪದ) ಎಂಬುದರ ವೆಬ್ಸ್ಟರ್ಸ್ *ಡಿಕ್ಷನರಿಯ* ಅರ್ಥವಿವರಣೆಯನ್ನು ಕೊಡಲು ಬಯಸುತ್ತೇನೆ: “(1) ಒಂದರ ಮೇಲೆ ಸುರಿದು ಅಡಿಯಲ್ಲಿ ಹೂಳು; (2) ದಮನಮಾಡು, ಮಟ್ಟಹಾಕು.”

“ಕೆಡುಕರು” ಯಾರೆಂಬುದರ ಅರ್ಥವಿವರಣೆ ನೀಡಲು, ನಾವು ಪ್ರಕಟನೆ ಪುಸ್ತಕದೊಂದಿಗೆ ಆರಂಭಿಸೋಣ. ಪ್ರಕಟನೆ 12:9 ಹೀಗೆಂದು ಹೇಳುತ್ತದೆ, “ಭೂಲೋಕದವರನ್ನೆಲ್ಲಾ ಮರುಳುಗೊಳಿಸುವ ಆ ಮಹಾ ಘಟಸರ್ಪನು ಅಂದರೆ ಪಿಶಾಚನೆಂತಲೂ ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪವು ದಬ್ಬಲ್ಪಟ್ಟು ಭೂಮಿಗೆ ಬಿದ್ದನು; ಅವನ ದೂತರೂ ಅವನೊಂದಿಗೆ ದಬ್ಬಲ್ಪಟ್ಟರು.” ಈಗ, ಪಿಶಾಚನು, ಅಥವಾ ಸೈತಾನನು, ಸಂಪೂರ್ಣ ಲೋಕವನ್ನು ವಂಚಿಸಿದ್ದರೆ, ಸಂಪೂರ್ಣ ಲೋಕವು ಸೈತಾನನಿಂದ ವಂಚನೆಗೊಳಗಾಗುವ ಮೂಲಕ ದುಷ್ಟವಾಗಿದೆ. “ಸಂಪೂರ್ಣ ಲೋಕ” ಎಂದರೆ ಕುರಿಯಾದಾತನ ಜೀವಬಾಧ್ಯರ ಪಟ್ಟಿಯಲ್ಲಿ (ಪ್ರಕಟನೆ 13:8) ಯಾರ ಹೆಸರನ್ನು ಬರೆಯಲಾಗಿದೆಯೋ ಆ ನಮ್ಮನ್ನು ಹೊರತುಪಡಿಸಿ ಎಂಬುದು ನನ್ನ ಮಾತಿನ ಅರ್ಥ.

ಈಗ, ನನ್ನ ಮಾತನ್ನು ಬಲಗೊಳಿಸಲು ಪ್ರಕಟನೆ 13:1 ನೋಡೋಣ. ಅಪೋಸ್ತಲನಾದ ಯೋಹಾನನು ಹೀಗೆಂದನು, “ಸಮುದ್ರದಿಂದ ಮೃಗವು [ಒಂದು ರಾಜ್ಯ] ಏರಿ ಬರುವುದನ್ನು ಕಂಡೆನು. ಅದಕ್ಕೆ ಏಳು ತಲೆಗಳೂ ಹತ್ತು ಕೊಂಬುಗಳೂ [ಇದು ರೋಮಿನ ಏಳು ಬೆಟ್ಟಗಳ ಪ್ರತೀಕವಾಗಿದೆ,[1] ಮತ್ತು ಹತ್ತು ಕೊಂಬುಗಳು ಎಂದರೆ ಸಂಯುಕ್ತ ರಾಷ್ಟ್ರಗಳ ಒಕ್ಕೂಟದ ಒಂದು-ವಿಶ್ವ ಸರ್ಕಾರದ ಪ್ರತಿಪಾದನೆ], ಕೊಂಬುಗಳ ಮೇಲೆ ಹತ್ತು ಮುಕುಟಗಳೂ [ರೋಮ್ ನ ಸಂಯುಕ್ತ ರಾಷ್ಟ್ರಗಳ ಒಕ್ಕೂಟದ ಒಂದು-ವಿಶ್ವ ಸರ್ಕಾರ, ಮಾಧ್ಯಮ, ಮತ್ತು ಕುಪಂಥ ಚರ್ಚಿಗೆ ತಮ್ಮ ಶಕ್ತಿ ಮತ್ತು ಬಲವನ್ನು ಕೊಡಲು ಒಗ್ಗೂಡಿರುವ ಹತ್ತು ರಾಜ್ಯಗಳು ಇವು ಎಂಬುದನ್ನು ತೋರಿಸುತ್ತದೆ. ಸೈತಾನನ ಒಂದು-ವಿಶ್ವ ಸರ್ಕಾರ, ಯು.ಎನ್. ಹೊಸ ವಿಶ್ವ ಪಂಥ, ಕುಪಂಥ ಚರ್ಚ್, ಮತ್ತು ಮಾಧ್ಯಮಗಳನ್ನು ಧಿಕ್ಕರಿಸುವ ಧೈರ್ಯ ಮಾಡುವ ಯಾರನ್ನೇ ಆಗಲಿ ದಮನಮಾಡಲು, ಹೂಳಲು ಮತ್ತು ಮಟ್ಟಹಾಕಲು ಸಾಧ್ಯವಾಗುವಂತೆ ಅಗಾಧ ದುಷ್ಟತನವನ್ನು ಹೊಂದಲು ಸೈತಾನನು ಹೀಗೆ ಮಾಡಿದನು ಮತ್ತು ಈಗಲೂ ಮಾಡುತ್ತಿದ್ದಾನೆ. ಒಳ್ಳೆಯ ಜನರು ಕೆಟ್ಟವರಾಗಿ ಕಾಣುವಂತೆ ಮಾಡಲು ಸೈತಾನನು ವ್ಯವಸ್ಥಿತ ಯೋಜನೆಯೊಂದಿಗೆ ಮಾಧ್ಯಮವನ್ನು ಬಳಸುತ್ತಿದ್ದಾನೆ.] ತಲೆಗಳ ಮೇಲೆ ದೇವದೂಷಣನಾಮಗಳೂ ಇದ್ದವು.”

“ನಾನು ಕಂಡ ಮೃಗವು ಚಿರತೆಯಂತಿತ್ತು [ಇದು ಭಾರತದ ಪ್ರತೀಕವಾಗಿದೆ]; ಅದರ ಕಾಲುಗಳು ಕರಡಿಯ ಕಾಲುಗಳಂತೆಯೂ [ರಷ್ಯಾದ ಪ್ರತೀಕ] ಅದರ ಬಾಯಿ ಸಿಂಹದ ಬಾಯಿಯಂತೆಯೂ ಇದ್ದವು [ಇದು ಯು.ಕೆ.ಯ ಪ್ರತೀಕವಾಗಿದೆ]. ಅದಕ್ಕೆ ಘಟಸರ್ಪನು [ಪಿಶಾಚನು] ತನ್ನ [ಅಗಾಧ] ಶಕ್ತಿಯನ್ನೂ, ಮತ್ತು ತನ್ನ ಸಿಂಹಾಸನವನ್ನೂ [ಸೈತಾನನ ಸಿಂಹಾಸನ, ರೋಮಿನಲ್ಲಿ ಮುಖ್ಯಕಾರ್ಯಾಲಯ ಹೊಂದಿರುವ ವ್ಯಾಟಿಕನ್] ಮತ್ತು ಮಹಾ ಅಧಿಕಾರವನ್ನೂ [ಅಂದರೆ ಸಂಪೂರ್ಣ ಲೋಕದ ಮೇಲೆ ಅಧಿಕಾರ ಅಥವಾ ಪ್ರಚಂಡ ಶಕ್ತಿ] ಕೊಟ್ಟನು. ಅದರ ತಲೆಗಳಲ್ಲಿ ಒಂದು ತಲೆ ಗಾಯಹೊಂದಿ ಸಾಯುವ ಹಾಗಿರುವುದನ್ನು ಕಂಡೆನು. ಆ ಮರಣಕರವಾದ ಗಾಯವು ವಾಸಿಯಾಯಿತು [ದೇವಜನರನ್ನು ಮತ್ತು ಸಂಪೂರ್ಣ ಲೋಕದ ಜನರನ್ನು ಹೂಳಲು, ದಮನಮಾಡಲು, ಮತ್ತು ಮಟ್ಟಹಾಕಲು ಮಾತ್ರವಲ್ಲದೆ ಸರ್ವಶಕ್ತನಾದ ದೇವರ ಪವಿತ್ರ ನಾಮವನ್ನು, *‘ಎಲ್ ಶದ್ದಾಯಿ’,* ದೂಷಿಸಲು ಪ್ರಚಂಡವಾದ ದುಷ್ಟ ಶಕ್ತಿಯನ್ನು ರೋಮ್, ವ್ಯಾಟಿಕನ್ನಿಗೆ, ಕೊಡುತ್ತಾ ಈ ಕೊನೆಯ ದಿನಗಳಲ್ಲಿ ಸೈತಾನನ ಆತ್ಮವು ಪುನಃ ರೋಮಿನೊಳಗೆ ಪ್ರವೇಶಿಸಿದವರೆಗೆ ಪುರಾತನ ರೋಮ್ ನಾಶವಾಗಿ ವಾಸ್ತವಿಕವಾಗಿ ಮುಗಿದುಹೋಗಿತ್ತು (ಸತ್ತುಹೋಗಿತ್ತು) ಎಂದು ದೇವರು ಯೋಹಾನನಿಗೆ ಮತ್ತು ನಮಗೆ, ಇಬ್ಬರಿಗೂ ಜ್ಞಾಪಿಸುತ್ತಿದ್ದಾರೆ]; [ಮೋಸಹೋದ] ಭೂಲೋಕದವರೆಲ್ಲರೂ [ಕೆಡುಕರು] ಆ ಮೃಗವನ್ನು ನೋಡುತ್ತಾ ಆಶ್ಚರ್ಯಪಟ್ಟರು; ಘಟಸರ್ಪನು ಆ ಮೃಗಕ್ಕೆ [ಅಗಾಧ ದುಷ್ಟತನದ ವಿಶ್ವ ಸರ್ಕಾರ] ಅಧಿಕಾರವನ್ನು ಕೊಟ್ಟವನಾದ್ದರಿಂದ ಅವರು ಆ ಘಟಸರ್ಪನಿಗೆ [ಪಿಶಾಚನಿಗೆ] ನಮಸ್ಕಾರ ಮಾಡುವವರಾದರು” (ಪ್ರಕಟನೆ 13:2-4a).

ಅವರು ಪಿಶಾಚನನ್ನು ಆರಾಧಿಸುತ್ತಿರುವುದರಿಂದ ಸಂಪೂರ್ಣ ಲೋಕವು ದುಷ್ಟವಾಗಿರುವುದ-

*(ಪುಟ 2ರಲ್ಲಿ ಮುಂದುವರಿದಿದೆ)*

1 ಪ್ರಕಟನೆ 17:9

# ಅಗಾಧ ದುಷ್ಟತನ

*(ಪುಟ 1 ರಿಂದ ಮುಂದುವರಿದಿದೆ)*

ನ್ನು ನೀವು ಸ್ಪಷ್ಟವಾಗಿ ನೋಡಬಹುದು.[2] ಪುನಃ, ಇದರಲ್ಲಿ ಕುರಿಯಾದಾತನ ಜೀವಬಾಧ್ಯರ ಪಟ್ಟಿಯಲ್ಲಿ ಯಾರ ಹೆಸರು ಬರೆದಿದೆಯೋ, ನಮ್ಮಲ್ಲಿ ಅಂಥವರನ್ನು ಹೊರತುಪಡಿಸಿ ಲೋಕದ ಎಲ್ಲಾ ಜನರು ಸೇರಿದ್ದಾರೆ. ದುಷ್ಟ ಜನರ ಸಂಪೂರ್ಣ ಲೋಕವು ಸೈತಾನನ ಪ್ರಚಂಡ ದುಷ್ಟ ಶಕ್ತಿಯನ್ನು ಆರಾಧಿಸುತ್ತಿದೆ. ಅವನು, ಜೀವಬಾಧ್ಯರ ಪಟ್ಟಿಯಲ್ಲಿ ಯಾರ ಹೆಸರು ಬರೆದಿಲ್ಲವೋ ಲೋಕದಲ್ಲಿರುವ ಅಂಥ ಪ್ರತಿಯೊಬ್ಬರೊಂದಿಗೆ ಮೋಸದಿಂದ (ಮಾಧ್ಯಮದ ಮೂಲಕ) ತನ್ನನ್ನು ಜೋಡಿಸಿಕೊಂಡಿದ್ದಾನೆ.

ಲೋಕದ ಚರಿತ್ರೆಯಲ್ಲಿ ಇತರ ಹಲವಾರು ಸಂದರ್ಭಗಳಲ್ಲಿ ಸೈತಾನನ ಅಡಿಯಲ್ಲಿ ದುಷ್ಟ ಮನುಕುಲವು ಉಳಿದ ನಮ್ಮೆಲ್ಲರ ಹುಟ್ಟಡಗಿಸಲು ಪ್ರಯತ್ನಿಸಿದೆ. ಆದಾಗ್ಯೂ, ದೇವರು ಮಣ್ಣಿನಿಂದ ಸೃಷ್ಟಿಸಿದ ಮನುಕುಲಕ್ಕೆ[3] ತಾನು ಅವರಿಗಿಂತ ಎಷ್ಟು ಬಲಶಾಲಿ ಎಂದು ತೋರಿಸಿದ್ದಾರೆ. ಅವರು ಪ್ರಳಯದ ನೀರು ಎಲ್ಲರ ಮೂಗು ಮತ್ತು ಗಂಟಲುಗಳಲ್ಲಿ ಹರಿಯಲು ಬಿಟ್ಟು ಲೋಕದಲ್ಲಿದ್ದ ಎಲ್ಲಾ ಕೆಟ್ಟ ದೇಹಗಳಿಂದ ಜೀವವನ್ನು ನಂದಿಸಿದರು, ನೋಹ ಮತ್ತು ಅವನ ಕುಟುಂಬವನ್ನು[4] ಹೊರತುಪಡಿಸಿ ಅವರೆಲ್ಲರನ್ನು ನೀರಿನಲ್ಲಿ ಮುಳುಗಿಸಿದರು - ಅವರನ್ನು ಕೊಂದರು.

ಮನುಷ್ಯರೆಲ್ಲರೂ ಬೇರೆ ಬೇರೆ ಭಾಷೆಗಳಲ್ಲಿ ಮಾತನಾಡುವಂತೆ ಮಾಡಿ, ಅವರು ದುಷ್ಟತನದಲ್ಲಿ ಐಕ್ಯವಾಗುವುದನ್ನು ಅಸಾಧ್ಯಗೊಳಿಸುವ ಮೂಲಕ (ಆದಿಕಾಂಡ 11:1-9) ಬಾಬೆಲ್ ಗೋಪುರದಲ್ಲಿ ಸಂಯುಕ್ತ ರಾಷ್ಟ್ರವನ್ನು, ಅಥವಾ ಒಂದು-ವಿಶ್ವ ಸರ್ಕಾರವನ್ನು ಸೃಷ್ಟಿಸುವ ಮನುಷ್ಯರ ಮೊದಲ ಪ್ರಯತ್ನವನ್ನು ಕೂಡ ದೇವರು ನಾಶ ಮಾಡಿದರು. ದೇವರು ಹೀಗೆ ಮಾಡಿದ್ದೇಕೆಂದರೆ ಅವರಿಗೆ ತಿಳಿದಿತ್ತು ಮತ್ತು ಈಗಲೂ ತಿಳಿದಿದೆ, "ಹೃದಯವು ಎಲ್ಲಕ್ಕಿಂತಲೂ ವಂಚಕ; ಮತ್ತು ಅತ್ಯಂತ ಕೆಟ್ಟದ್ದಾಗಿದೆ; ಅದನ್ನು ಯಾರು ತಿಳಿದಾರು? ಯೆಹೋವನಾದ ನಾನು ಪ್ರತಿಯೊಬ್ಬನಿಗೂ ಕರ್ಮ ಫಲವನ್ನು ಅವನವನ ನಡತೆಗೆ ತಕ್ಕ ಹಾಗೆ ಕೊಡಬೇಕೆಂದು ಹೃದಯವನ್ನು ಪರೀಕ್ಷಿಸುವವನೂ ಅಂತರ್ ಇಂದ್ರಿಯವನ್ನು ಶೋಧಿಸುವವನೂ ಆಗಿದ್ದೇನೆ. ಆಸ್ತಿಪಾಸ್ತಿಗಳನ್ನು ಅನ್ಯಾಯವಾಗಿ ಸಂಪಾದಿಸಿಕೊಂಡವನು ಮೊಟ್ಟೆಗಳ ಮೇಲೆ ಕುಳಿತುಕೊಳ್ಳುವ ಆದರೆ ಅವುಗಳನ್ನು ಕಾವು ಕೊಟ್ಟು ಮರಿಮಾಡದ ಕೌಜುಗ ಹಕ್ಕಿಗೆ ಸಮಾನನು; ಅವನ ಮಧ್ಯಪ್ರಾಯದಲ್ಲಿ ಅವನು ಅವುಗಳನ್ನು ಬಿಟ್ಟುಬಿಡುವನು, ಮತ್ತು ಅಂತ್ಯಕಾಲದಲ್ಲಿ ಮೂರ್ಖನೆನಿಸಿಕೊಳ್ಳುವನು; .

"ನಮ್ಮ ಪವಿತ್ರಾಲಯಸ್ಥಾನವು ಆದಿಯಿಂದಲೂ ಉನ್ನತವಾದ ಮಹಿಮೆಯ ಸಿಂಹಾಸನವಾಗಿದೆ. ಯೆಹೋವನೇ, ಇಸ್ರಾಯೇಲ್ಯರ ನಿರೀಕ್ಷೆಯೇ, ನಿನ್ನನ್ನು ಬಿಟ್ಟು ಹೋಗುವವರು ಆಶಾಭಂಗಪಡುವರು; ಯೆಹೋವನಾದ ನಿನ್ನನ್ನು ತೊರೆದವರು ಜೀವಜಲದ ಬುಗ್ಗೆಯನ್ನು ತೊರೆದವರಾಗಿದ್ದಾರೆ; ಅವರ ಹೆಸರು ಧೂಳಿನಲ್ಲಿ ಬರೆಯಲ್ಪಡುವುದು. ಯೆಹೋವನೇ, ನನ್ನನ್ನು ಸ್ವಸ್ಥಪಡಿಸು, ಆಗ ಸ್ವಸ್ಥನೇ ಆಗುವೆನು; ನನ್ನನ್ನು ರಕ್ಷಿಸು, ಆಗ ರಕ್ಷಿತನೇ ಆಗುವೆನು; ನೀನೇ ನನಗೆ ಸ್ತುತ್ಯನು. ಆಹಾ, ಜನರು ನನಗೆ - ಯೆಹೋವನ ಮಾತೆಲ್ಲಿ? ಅದು ಈಗಲೇ ನೆರವೇರಲಿ ಎಂದು ಹೇಳುತ್ತಾರೆ. ನಾನಾದರೋ ಸಭಾಪಾಲನೆಯಲ್ಲಿ ನಿನ್ನನ್ನು ಹಿಂಬಾಲಿಸುವುದನ್ನು ಬಿಡುವುದಕ್ಕೆ ಮುಂದಾಗಲಿಲ್ಲ; ಅನಿವಾರ್ಯ ವಿಪತ್ತಿನ ದಿನವನ್ನು ಅಪೇಕ್ಷಿಸಲಿಲ್ಲ; ನೀನೇ ಬಲ್ಲೆ; ನಿನ್ನ ಸಮಕ್ಷಮದಲ್ಲೇ ನನ್ನ ಬಾಯ ಮಾತು ಹೊರಟಿತು. ನನಗೆ ಭಯಾಸ್ಪದವಾಗಬೇಡ; ಕೇಡಿನ ಕಾಲದಲ್ಲಿ ನನಗೆ ಆಶ್ರಯವಾಗಿರುವಿ. ನನ್ನ ಹಿಂಸಕರಿಗೆ ಅವಮಾನವಾಗಲಿ, ನನಗಾಗದಿರಲಿ; ಭಯಭ್ರಾಂತಿಯು ಅವರನ್ನು ಹಿಡಿಯಲಿ, ನನ್ನನ್ನು ಬೇಡ; ಅವರಿಗೆ ಕೇಡುಗಾಲವನ್ನು ಬರಮಾಡಿ ವಿಪರೀತಭಂಗದಿಂದ ಅವರನ್ನು ನಾಶಪಡಿಸು." (ಯೆರೆಮೀಯ 17:9-18)

ಹೀಗೆ ಎರಡು ಹೊಡೆತಗಳು ಬಿದ್ದವು, ಆದರೂ ಲೋಕ ಅಸ್ತಿತ್ವದಲ್ಲಿತ್ತು. ಆದರೆ ಮೂರನೇ ಹೊಡೆತ ಬಂದಾಗ - ಮತ್ತು ಅದು ಬೇಗನೆ ಬರಲಿದೆ - "ಮೂರು ಹೊಡೆತಗಳು ಮತ್ತು ನೀವು ಬೀಳುವಿರಿ," ಇದಕ್ಕೆ ಕುರಿಯಾದಾತನ ಜೀವಬಾಧ್ಯರ ಪಟ್ಟಿಯಲ್ಲಿ ಹೆಸರಿಸಲಾಗಿರುವ ನಾವು ಹೊರತಾಗಿದ್ದೇವೆ (ಪ್ರಕಟನೆ 21:9-27). ದೊಡ್ಡ ಬೆಂಕಿಯೊಂದು ಬರಲಿದೆ, ಮತ್ತು ಕುರಿಯಾದಾತನ ಜೀವಬಾಧ್ಯರ ಪಟ್ಟಿಯಲ್ಲಿ ಇಲ್ಲದವರು ನಿರಂತರತೆಯಾದ್ಯಂತ ಶಾಶ್ವತವಾಗಿ ಉರಿಯುತ್ತಲಿರುತ್ತಾರೆ.[5]

ಕೆಡುಕರ ಸಂಪೂರ್ಣ ಲೋಕವು ಯು.ಎನ್.ನ ಒಂದು-ವಿಶ್ವ ಸರ್ಕಾರವನ್ನು ಅಥವಾ ಹೊಸ ವಿಶ್ವ ಪಂಥವನ್ನು ಆರಾಧಿಸುತ್ತಿದೆ ಎಂದು ಪ್ರಕಟನೆ 13:4b ಈ ಮಾತುಗಳಲ್ಲಿ ಹೇಳುತ್ತದೆ: "ಇದಲ್ಲದೆ ಆ ಮೃಗಕ್ಕೂ ನಮಸ್ಕಾರ ಮಾಡಿ - ಈ ಮೃಗಕ್ಕೆ ಸಮಾನರು ಯಾರು? ಇದರ ಮೇಲೆ ಯುದ್ಧ ಮಾಡುವುದಕ್ಕೆ ಯಾರು ಶಕ್ತರು? ಅಂದರು." ಬೇರೆ ಮಾತಿನಲ್ಲಿ ಹೇಳುವುದಾದರೆ, ಈ ಸಂಯುಕ್ತ ರಾಷ್ಟ್ರಗಳ ಕೂಟದ ಒಂದು-ವಿಶ್ವ ಸರ್ಕಾರದಲ್ಲಿ ಸೇರಿರುವ, ಮಾಧ್ಯಮಗಳ ಪ್ರಚಂಡ ಸುಳ್ಳುಗಳ ವಿರುದ್ಧ, ನ್ಯಾಯಾಂಗ ವ್ಯವಸ್ಥೆ ಮತ್ತು ಮಾಧ್ಯಮಗಳ ಪ್ರಚಂಡ ಸುಳ್ಳು ಆಪಾದನೆಗಳ ವಿರುದ್ಧ, ತಡೆಯಲಾರದಷ್ಟು ದುಷ್ಟವಾದ ದುಷ್ಕೃತ್ಯಗಳು, ಅನ್ಯಾಯ, ಕೊಲೆಗಳು ಪ್ರತಿಯೊಂದು ಬಗೆಯ ವಿನಾಶಗಳ ವಿರುದ್ಧ, ಕಳ್ಳತನ, ದುಂದುಗಾರಿಕೆ, ಪಾಪಿತನ, ದೇವದೂಷಣೆಗಳು, ನಿರಾಧಾರವಾಗಿ ಕಿರುಕುಳ ಕೊಡುವುದು, ಮತ್ತು ಅಪಹರಣಗಳ ವಿರುದ್ಧ, ಸೈತಾನನ ಪ್ರಚಂಡ, ಪೈಶಾಚಿಕ ಮತ್ತು ದುಷ್ಟ ಬಲದಿಂದ ಈ ಭೂಮಿಯ ದೇವಜನರತ್ತ ಎಸೆಯಲಾಗುತ್ತಿರುವ ದ್ವೇಷದ ಈ ಬಲದ ವಿರುದ್ಧ ಯಾರು ಹೋರಾಡಬಲ್ಲರು?

ಈ ಪ್ರಚಂಡ ದುಷ್ಟನಾಗಿರುವ ರಾಕ್ಷಸನ ವಿರುದ್ಧ ಹೋರಾಡಲು ತಮ್ಮನ್ನು ಸಿದ್ಧವಾಗಿರಿಸಿಕೊಳ್ಳಲು ಧರ್ಮನಿಷ್ಠರಿಗೆ ಇರುವುದು ಒಂದೇ ಮಾರ್ಗ. ನೀವು ಎಂದಾದರೂ ದೇವರನ್ನು ನಂಬಿದ್ದರೆ, ನೀವು ದೇವರ ಸಂಪೂರ್ಣ ಶಸ್ತ್ರಾಸ್ತ್ರಗಳನ್ನು ತೊಡಬೇಕೆಂದು ಆತ ಹೇಳುತ್ತಿರುವ ಈ ಸಮಯದಲ್ಲಿ ಆತನನ್ನು ನಂಬಿದರೆ ಒಳ್ಳೆಯದು "ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ನಂಬಿಕೆಯೆಂಬ [ದೇವರ ಪದದಲ್ಲಿ] ಗುರಾಣಿಯನ್ನು ಹಿಡಿದುಕೊಳ್ಳಿರಿ; ಅದರಿಂದ ನೀವು ಕೆಡುಕನ ಅಗ್ನಿಬಾಣಗಳನ್ನೆಲ್ಲಾ [ಸುಳ್ಳು ಆಪಾದನೆಗಳು ಮತ್ತು ದುಷ್ಟ ಕಾನೂನುಗಳು] ಆರಿಸುವುದಕ್ಕೆ ಶಕ್ತರಾಗುವಿರಿ" (ಎಫೆಸದವರಿಗೆ 6:16).

ದೇವರ ವಾಕ್ಯದ ಇಡಿ ಪ್ಯಾರಾ ಹೀಗೆನ್ನುತ್ತದೆ: "ಕಡೇ ಮಾತೇನೆಂದರೆ, ನೀವು ಕರ್ತನನ್ನೂ ಆತನ ಅತ್ಯಧಿಕವಾದ ಶಕ್ತಿಯನ್ನೂ [ಆತ್ಮದಲ್ಲಿ] ಆಶ್ರಯಿಸಿಕೊಂಡವರಾಗಿ ಬಲಗೊಳ್ಳಿರಿ. ಸೈತಾನನ [ಲೋಕದ ಎಲ್ಲಾ ಪ್ರಚಂಡ ಕೆಡುಕರು] ತಂತ್ರೋಪಾಯಗಳನ್ನು ನೀವು ಎದುರಿಸಿ ನಿಲ್ಲುವುದಕ್ಕೆ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ. ನಾವು ಹೋರಾಡುವುದು ಮನುಷ್ಯ ಮಾತ್ರದವರ ಸಂಗಡವಲ್ಲ; ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ [ಉನ್ನತ ಸ್ಥಾನಗಳಲ್ಲಿರುವ ಮನುಷ್ಯರಿಂದ, ಸೈತಾನನ ದುಷ್ಟ ಸೇನೆಯ ಸದಸ್ಯರಿಂದ ಹರಡಲ್ಪಟ್ಟಿರುವುದು] ನಾವು ಹೋರಾಡುವವರಾಗಿದ್ದೇವೆ.

"ಆದುದರಿಂದ ಕಠಿನ ಯುದ್ಧವು ನಡೆಯುವ ದಿವಸದಲ್ಲಿ [ಸುಳ್ಳು ಆಪಾದನೆಗಳು ಮತ್ತು ವಿಚಿತ್ರ ಕಾನೂನುಗಳು ಮತ್ತು ಕಿರುಕುಳಗಳು ನಿಮಗೆ ಎದುರಾದಾಗ] ಆ ವೈರಿಗಳನ್ನು ಎದುರಿಸುವುದಕ್ಕೂ ಮಾಡಬೇಕಾದದ್ದೆಲ್ಲವನ್ನು ಮಾಡಿ ಜಯಶಾಲಿಗಳಾಗಿ ನಿಲ್ಲುವುದಕ್ಕೂ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ತೆಗೆದುಕೊಳ್ಳಿರಿ [ಸಂಪೂರ್ಣ ದೇವರ ಪದವನ್ನು ಅಧ್ಯಯನ ಮಾಡಿ[6]]. ಸತ್ಯವೆಂಬ [ದೇವರ ಪದ] ನಡುಕಟ್ಟನ್ನು ಕಟ್ಟಿಕೊಂಡು ನೀತಿಯೆಂಬ ಎದೆಕಟ್ಟನ್ನು ಧರಿಸಿಕೊಂಡು ಸಮಾಧಾನದ ವಿಷಯವಾದ ಸುವಾರ್ತೆಯನ್ನು ತಿಳಿಸುವುದರಲ್ಲಿ ಸಿದ್ಧವಾದ ಮನಸ್ಸೆಂಬ ಕೆರಗಳನ್ನು ಮೆಟ್ಟಿಕೊಂಡು ನಿಲ್ಲಿರಿ. ಮತ್ತು ನಂಬಿಕೆಯೆಂಬ ಗುರಾಣಿಯನ್ನು ಹಿಡಿದುಕೊಳ್ಳಿರಿ; ಅದರಿಂದ ನೀವು ಕೆಡುಕನ ಅಗ್ನಿಬಾಣಗಳನ್ನೆಲ್ಲಾ ಆರಿಸುವುದಕ್ಕೆ ಶಕ್ತರಾಗುವಿರಿ. ಇದಲ್ಲದೆ ರಕ್ಷಣೆಯೆಂಬ ಶಿರಸ್ತ್ರಾಣವನ್ನು ಇಟ್ಟುಕೊಂಡು ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿಯಿರಿ. ನೀವು ಪವಿತ್ರಾತ್ಮ ಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲ ವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ. ಇದರಲ್ಲಿ ಪೂರ್ಣ ಸ್ಥಿರಚಿತ್ತರಾಗಿದ್ದು ದೇವಜನರೆಲ್ಲರ ವಿಷಯದಲ್ಲಿ ವಿಜ್ಞಾಪನೆಮಾಡುತ್ತಾ ಎಚ್ಚರವಾಗಿರಿ" (ಎಫೆಸದರಿಗೆ 6:10-18). ಅಂದರೆ, ಸೈತಾನನ ಹೊಸ ದುಷ್ಟ ಕಾನೂನುಗಳ ಕಾರಣದಿಂದಾಗಿ ದೇವಜನರಿಗೆ ನಿಮ್ಮ ನೆರವಿನ ಅಗತ್ಯವಿದೆ ಎಂದು ನೀವು ಅರಿತಾಗ ಅವರಿಗೆ ಬೆಂಬಲವಾಗಿ ನಿಲ್ಲಬೇಕು.

6 ಮತ್ತಾಯ 4:4, ಯೋಹಾನ 8:31-32, ಎಫೆಸದವರಿಗೆ 6:11-17, ಕೊಲೊಸ್ಸೆಯವರಿಗೆ 3:16, 2 ಥೆಸಲೋನಿಕದವರಿಗೆ 2:15, 2 ತಿಮೊಥೆಯನಿಗೆ 2:15, 3:14-17, 1 ಪೇತ್ರನು 2:2



ಅಲಾಮೊ ಮಿನಿಸ್ಟ್ರೀಸ್ ಆನ್ಲೈನ್
www.alamoministries.com

2 ಮತ್ತಾಯ 24:11-12, 24, ಪ್ರಕಟನೆ 13:1-4, 11-15, 17:8, 18:2-3, 23 3 ಆದಿಕಾಂಡ 2:7, 3:19 4 ಆದಿಕಾಂಡ ಅಧ್ಯಾಯ 6-7, 1 ಪೇತ್ರನು 3:20 5 2 ಪೇತ್ರನು 3:10-12, ಪ್ರಕಟನೆ 20:11-15

ಪ್ರಕಟನೆ 13:5-8 ಹೀಗೆಂದು ಹೇಳುತ್ತದೆ, "ಬಡಾಯಿಮಾತುಗಳನ್ನೂ ದೂಷಣೆಯ ಮಾತುಗಳನ್ನೂ [ಇದು ಅಗಾಧ ದುಷ್ಟತನದ ಒಂದು-ವಿಶ್ವ ಸರ್ಕಾರದ ಮಾಧ್ಯಮಗಳು] ಆಡುವ ಬಾಯಿ ಅದಕ್ಕೆ [ಸಹಿಸಲಾರದಷ್ಟು ದುಷ್ಟವಾದ ಒಂದು-ವಿಶ್ವ ಸರ್ಕಾರ] ಕೊಡಲ್ಪಟ್ಟಿತು. ಮತ್ತು ನಲ್ವತ್ತೆರಡು ತಿಂಗಳ ಪರ್ಯಂತ ತನ್ನ ಕಾರ್ಯಗಳನ್ನು ನಡೆಸುವ ಅಧಿಕಾರವೂ ಅದಕ್ಕೆ ಕೊಡಲ್ಪಟ್ಟಿತು. ಅದು ಬಾಯಿತೆರೆದು ದೇವರನ್ನು ದೂಷಿಸಿದ್ದಲ್ಲದೆ ಆತನ ನಾಮವನ್ನೂ ಆತನ ನಿವಾಸವನ್ನೂ [ಆತ ವಾಸಿಸುವ ದೇವಜನರಾದ ನಾವು ದೇವರ ನಿವಾಸವಾಗಿದ್ದೇವೆ] ಪರಲೋಕ ನಿವಾಸಿಗಳನ್ನೂ [ನಮಗಿಂತ ಮೊದಲು ಮನೆಗೆ ಹೋಗಿರುವ ದೇವಜನರು ಮತ್ತು ದೇವದೂತರು (ಪುನಃ, ಮಾಧ್ಯಮವು ಆ ಎಲ್ಲಾ ಒಳ್ಳೆಯದನ್ನು ದುಷ್ಟವಾಗಿ ಕಾಣುವಂತೆ ಮಾಡುತ್ತದೆ)] ದೂಷಿಸಿತು. ಇದಲ್ಲದೆ ದೇವಜನರ ಮೇಲೆ ಯುದ್ಧಮಾಡಿ ಅವರನ್ನು ಜಯಿಸುವುದಕ್ಕೆ ಅದಕ್ಕೆ ಅಧಿಕಾರ ಕೊಡಲ್ಪಟ್ಟಿತು. ಮತ್ತು ಸಕಲ ಕುಲ ಪ್ರಜೆ ಭಾಷೆ ಜನಾಂಗಗಳ ಮೇಲೆ ಅದಕ್ಕೆ ಅಧಿಕಾರವು ಕೊಡಲ್ಪಟ್ಟಿತು. ಜಗದುತ್ಪತ್ತಿಗೆ ಮೊದಲೇ ಕೊಯ್ಯಲ್ಪಟ್ಟ ಕುರಿಯಾದಾತನ ಬಳಿಯಲ್ಲಿರುವ ಜೀವಬಾಧ್ಯರ ಪಟ್ಟಿಯಲ್ಲಿ ಯಾರಾರ ಹೆಸರುಗಳು ಬರೆದಿರುವದಿಲ್ಲವೋ ಆ ಭೂನಿವಾಸಿಗಳೆಲ್ಲರೂ ಅದಕ್ಕೆ ನಮಸ್ಕಾರ ಮಾಡುವರು [ಇದನ್ನು ಮಾಧ್ಯಮವು ನೆರವೇರಿಸುತ್ತದೆ]." ಪುನಃ, ಇವರು ಕೆಡುಕರು, ದೇವಜನರ ವಿರುದ್ಧ ಸುಳ್ಳು ಆಪಾದನೆಗಳನ್ನು ಹೊರಿಸುತ್ತಿರುವವರು ಮತ್ತು ಮಾಧ್ಯಮದ ಮೂಲಕ ಪ್ರಚಾರದ ಕಾರಣ ದೇವಜನರ ವಿರುದ್ಧ ಎಲ್ಲಾ ಸುಳ್ಳು ಆಪಾದನೆಗಳನ್ನು ಮಾಡುತ್ತಿರುವ ಭೂಮಿಯ ಮೇಲಿರುವ ಆ ಎಲ್ಲಾ ಜನರು. ಅದರಿಂದಾಗಿ ಅವರು ತಮ್ಮ ಆತ್ಮಗಳನನ್ನು ಕಳೆದುಕೊಳ್ಳುತ್ತಿದ್ದಾರೆ. ತಾವು ಗೆಲ್ಲುತ್ತಿರುವುದಾಗಿ ಅವರು ಭಾವಿಸುತ್ತಾರೆ, ಆದರೆ ಅವರೆಲ್ಲರೂ ಸೋಲುತ್ತಿದ್ದಾರೆ. ಅವರು ಅಪಜಯಿಗಳು.

ಪೇತ್ರನು ಬರೆದ ಎರಡನೆಯ ಪತ್ರಿಕೆ, ಅಧ್ಯಾಯ 2 ಹೀಗೆಂದು ಹೇಳುತ್ತದೆ, "ಆದರೆ ಇಸ್ರಾಯೇಲ್ ಜನರಲ್ಲಿ ಸುಳ್ಳು ಪ್ರವಾದಿಗಳೂ ಇದ್ದರಲ್ಲಾ; ಅದೇ ಪ್ರಕಾರ ನಿಮ್ಮಲ್ಲಿಯೂ ಸುಳ್ಳು ಬೋಧಕರು [ಮಾಧ್ಯಮ] ಇರುವರು. ಅವರು ನಾಶಕರವಾದ ಮತಭೇದಗಳನ್ನು [ಸಲಿಂಗ ವಿವಾಹ, ಗರ್ಭಪಾತ, ಇತ್ಯಾದಿ ಸೈತಾನನ ಹೊಸ ಕಾನೂನುಗಳಂಥವು] ಕಳ್ಳತನದಿಂದ ಹುಟ್ಟಿಸುವವರೂ ತಮ್ಮನ್ನು ಕೊಂಡ ಒಡೆಯನನ್ನೂ ಕೂಡ ತಾವು ಅರಿಯೆವು ಎಂದು ಹೇಳುವವರೂ ಆಗಿದ್ದು ಫಕ್ಕನೆ ತಮ್ಮ ಮೇಲೆ ನಾಶವನ್ನು ಬರಮಾಡಿಕೊಳ್ಳುವರು. ಅವರ ನಿರ್ಲಜ್ಜಾ [ಬಹಳ ಕೇಡುಂಟುಮಾಡುವ ಅಥವಾ ನಾಶಕರವಾದ] ಕೃತ್ಯಗಳನ್ನು ಅನೇಕರು ಅನುಸರಿಸುವರು; ಅವರಿಂದಾಗಿ ಸತ್ಯಮಾರ್ಗಕ್ಕೆ [ಯೇಸುವಿನ ಮಾರ್ಗಗಳು] ದೂಷಣೆ ಉಂಟಾಗುವುದು [ಸೈತಾನನ ವಿಶ್ವ ಮಾಧ್ಯಮ, ಸರ್ಕಾರ, ಮತ್ತು ರೋಮಿನ ಕುಪಂಥೀಯ ಚರ್ಚ್]. ಅವರು ದ್ರವ್ಯಾಶೆಯುಳ್ಳವರಾಗಿ ಕಲ್ಪನೆಯ ಮಾತುಗಳನ್ನು ಹೇಳುತ್ತಾ ನಿಮ್ಮಿಂದ ಲಾಭವನ್ನು ಸಂಪಾದಿಸಬೇಕೆಂದಿರುವರು. ಖಂಡಿತವಾಗಿಯೂ ಅಂಥವರು ನ್ಯಾಯತೀರ್ಪಿಗೆ ಮತ್ತು ದಂಡನೆಗೆ ಒಳಗಾಗುವರು ಮತ್ತು ಲೋಕಾದಿಯಿಂದ ಅಂಥವರಿಗೆ ದಂಡನೆಯ ತೀರ್ಪು ತಪ್ಪದೆ ಬರುತ್ತಿರುವುದು, ಅವರ ಶಾಶ್ವತ ನಾಶವು ತೂಕಡಿಸುವುದಿಲ್ಲ."

"ಹೇಗೆಂದರೆ ದೇವದೂತರು ಪಾಪ ಮಾಡಿದಾಗ ದೇವರು ಅವರನ್ನು ಸುಮ್ಮನೆ ಬಿಡದೆ ನರಕಕ್ಕೆ ದಬ್ಬಿ ನ್ಯಾಯತೀರ್ಪನ್ನು ಹೊಂದುವುದಕ್ಕೆ ಇಡಲ್ಪಟ್ಟವರಾಗಿರಬೇಕೆಂದು ಕತ್ತಲೇ ಗುಂಡಿಗಳಿಗೆ ಒಪ್ಪಿಸಿದನು. ಆತನು ಭಕ್ತಿಹೀನರಾದ ಪುರಾತನರ ಲೋಕವನ್ನು ಸುಮ್ಮನೆ ಬಿಡದೆ ಅವರ ಮೇಲೆ ಜಲಪ್ರಳಯವನ್ನು ಬರಮಾಡಿದನು; ಆದರೆ ಸುನೀತಿಯನ್ನು ಸಾರುವವನಾಗಿದ್ದ ನೋಹನನ್ನೂ ಅವನೊಂದಿಗೆ ಬೇರೆ ಏಳು ಮಂದಿಯನ್ನೂ ಉಳಿಸಿದನು. ಆತನು ಸೋದೋಮ ಗೊಮೋರ ಪಟ್ಟಣಗಳನ್ನು ಸುಟ್ಟು ಬೂದಿ ಮಾಡಿ ಮುಂದೆ ಭಕ್ತಿಹೀನರಾಗಿ ಬದುಕುವವರ [ಸೈತಾನನ ಹೊಸ ಸಲಿಂಗ ವಿವಾಹ ಕಾನೂನುಗಳ ಪ್ರಕಾರ ಬದುಕುವುದು, ಮತ್ತು ಪುರುಷ ಮತ್ತು ಸರ್ಕಾರದಿಂದ ಮೇಲಕ್ಕೆತ್ತಲ್ಪಟ್ಟ ಸ್ತ್ರೀ ಸಲಿಂಗ ಕಾಮ,[7] ಎಲ್ಲವೂ ಸೈತಾನನ ವ್ಯಾಟಿಕನ್ ಮಾಧ್ಯಮದ ಮೂಲಕ ಪ್ರಚಾರವಾಗುತ್ತವೆ] ಗತಿ ಇಂಥದೆಂದು ಸೂಚಿಸುವುದಕ್ಕಾಗಿ ಅವುಗಳ ನಾಶಕ್ಕೆ ಅಪ್ಪಣೆ ವಿಧಿಸಿದನು. ಆದರೆ ಆ ಅಧರ್ಮಿಗಳ [ಪುರುಷ ಸಲಿಂಗ ಕಾಮಿಗಳು, ಸ್ತ್ರೀ ಸಲಿಂಗ ಕಾಮಿಗಳು, ಎಲ್ಲಾ ಪುಂಗಾಮಿಗಳು] ನಾಚಿಕೆಗೆಟ್ಟ ನಡೆತೆಗೆ ವೇದನೆಗೊಂಡಿದ್ದ ನೀತಿವಂತನಾದ ಲೋಟನನ್ನು ತಪ್ಪಿಸಿದನು. (ಆ ನೀತಿವಂತನು ಅವರ ನಡುವೆ ಇದ್ದುಕೊಂಡು ಅವರ ಅನ್ಯಾಯಕೃತ್ಯಗಳನ್ನು ನೋಡುತ್ತಾ ಕೇಳುತ್ತಾ ಅವುಗಳ ನಿಮಿತ್ತ ದಿನೇ ದಿನೇ ತನ್ನ ನೀತಿಯುಳ್ಳ ಆತ್ಮದಲ್ಲಿ ಬಹಳವಾಗಿ ಕಳವಳಗೊಂಡನು.) ಕರ್ತನು ಭಕ್ತರನ್ನು ಪ್ರಲೋಭನೆಗಳಿಂದ ತಪ್ಪಿಸುವುದಕ್ಕೂ ದುರ್ಮಾರ್ಗಿಗಳನ್ನು ನ್ಯಾಯತೀರ್ಪಿನ ದಿನದ ತನಕ ಶಿಕ್ಷಾನುಭವದಲ್ಲಿ ಇಡುವುದಕ್ಕೂ ಬಲ್ಲವನಾಗಿದ್ದಾನೆ. ಮುಖ್ಯವಾಗಿ ಬಂಡುತನವನ್ನು ಆಶಿಸಿ ಶರೀರ ಭಾವಾನುಸಾರ ನಡೆದು ಪ್ರಭುತ್ವ ತಿರಸ್ಕಾರ ಮಾಡುವವರನ್ನು ಹೀಗೆ ಶಿಕ್ಷಿಸುವನು. ಇವರು ಸ್ವೇಚ್ಛಾಪರರಾಗಿದ್ದು ಮಹಾಪದವಿಯವರನ್ನು ನಿರ್ಭಯವಾಗಿ ದೂಷಿಸುತ್ತಾರೆ. ದೇವದೂತರು ಬಲದಲ್ಲಿಯೂ ಮಹತ್ತಿನಲ್ಲಿಯೂ ಶ್ರೇಷ್ಠರಾಗಿದ್ದರೂ ಕರ್ತನ ಮುಂದೆ ಅವರ ವಿರುದ್ಧ ದೋಷಾರೋಪವನ್ನು ಹೇಳುವದಿಲ್ಲವಲ್ಲ. ಆದರೆ ಸ್ವಾಭಾವಿಕವಾಗಿ ಬೇಟೆಗೂ ನಾಶನಕ್ಕೂ ಹುಟ್ಟಿರುವ ಮೃಗೀಯ ಪಶುಗಳಂತಿರುವ ಈ ದುರ್ಮಾರ್ಗಿಗಳು ತಮಗೆ ತಿಳಿಯದವುಗಳ ವಿಷಯಗಳನ್ನುದೂಷಣೆಮಾಡುವವರಾಗಿದ್ದಾರೆ. ಇವರು ತಮ್ಮ ಕೆಟ್ಟತನದಿಂದ ತಾವೇ ಕೆಟ್ಟುಹೋಗಿ ತಮ್ಮ ದುಷ್ಪ್ರವೃತ್ತಿಗೆ ಸರಿಯಾದ ದುಷ್ಫಲವನ್ನು ಹೊಂದುವರು. ದುಂದುಗಾರಿಕೆಯಲ್ಲಿ ಹಗಲನ್ನು ಕಳೆಯುವುದೇ ಸುಖವೆಂದೆಣಿಸುತ್ತಾರೆ. ಇವರು ನಿಮ್ಮ ಸಂಗಡ ಸೇರಿ ಔತಣಮಾಡುತ್ತಿರುವಾಗ ವಂಚಕರಾಗಿದ್ದು ಉಂಡು ಕುಡಿದು ಕಳಂಕಕ್ಕೂ ಅವಮಾನಕ್ಕೂ ಕಾರಣರಾಗಿದ್ದಾರೆ. ಇವರು ಜಾರತ್ವದಿಂದ ತುಂಬಿದ ಮತ್ತು ಪಾಪವನ್ನು ಬಿಡಲೊಲ್ಲದ ಕಣ್ಣುಳ್ಳವರೂ ಚಪಲಚಿತ್ತರನ್ನು ಮರುಳುಗೊಳಿಸುವವರೂ ಲೋಭದಲ್ಲಿ ತೇರ್ಗಡೆ ಹೊಂದಿದ ಮನಸ್ಸುಳ್ಳವರೂ ಶಾಪಕ್ಕೆ ಪಾತ್ರರೂ ಆಗಿದ್ದಾರೆ. ಇವರು ಅಚ್ಚುಕಟ್ಟಾದ ಮಾರ್ಗವನ್ನು ಬಿಟ್ಟು ಬೆಯೋರನ ಮಗನಾದ ಬಿಳಾಮನ ಮಾರ್ಗವನ್ನು ಹಿಡಿದು ತಪ್ಪಿಹೋಗಿದ್ದಾರೆ. ಈ ಬಿಳಾಮನು ಅಧರ್ಮದಿಂದ ದೊರಕುವ ದ್ರವ್ಯವನ್ನು ಪ್ರೀತಿಸಿದನು; ಆದರೆ ಅವನ ಅಕ್ರಮಕ್ಕೆ ಖಂಡನೆಯಾಯಿತು; ಮೂಕ ಪಶುವು ಮನುಷ್ಯ ಸ್ವರದಿಂದ ಮಾತಾಡಿ ಆ ಪ್ರವಾದಿಯ ಹುಚ್ಚುತನಕ್ಕೆ ಅಡ್ಡಿಮಾಡಿತು.

"ಇವರು ನೀರಿಲ್ಲದ ಬಾವಿಗಳೂ ಬಿರುಗಾಳಿಯಿಂದ ಬಡಿಸಿಕೊಂಡು ಹಾರಿಹೋಗುವ ಮಂಜೂ ಆಗಿದ್ದಾರೆ; ಇಂಥವರ ಪಾಲಿಗೆ ಶಾಶ್ವತ ಕಾರ್ಗತ್ತಲೆ ಕಾಯುತ್ತಿರುವುದು. ತಪ್ಪಾದ ಮಾರ್ಗದಲ್ಲಿ ನಡೆಯುವವರ ಸಹವಾಸದಿಂದ ಹೊಸದಾಗಿ ತಪ್ಪಿಸಿಕೊಂಡವರ ಸಂಗಡ ಇವರು ಹುರುಳಿಲ್ಲದ ದೊಡ್ಡ ದೊಡ್ಡ ಮಾತುಗಳನ್ನಾಡಿ ಬಂಡುಬಂಡಾದ ದುರಾಶೆಗಳನ್ನು ಹುಟ್ಟಿಸಿ ಅವರನ್ನು ಮರುಳುಗೊಳಿಸುತ್ತಾರೆ. ಸ್ವಾತಂತ್ರ್ಯ ಕೊಡುತ್ತೇವೆಂದು ಅವರಿಗೆ ವಾಗ್ದಾನಮಾಡುತ್ತಾರೆ, ಆದರೆ ತಾವೇ ಕೆಟ್ಟತನದ ದಾಸತ್ವದೊಳಗಿದ್ದಾರೆ. ಒಬ್ಬನು ಯಾವುದಕ್ಕೆ ಸೋತು ಹೋಗಿರುವನೋ ಅದರ ದಾಸತ್ವದೊಳಗಿರುವನಷ್ಟೆ[ಪರವಶಕ್ಕೊಳಪಟ್ಟ]. ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ವಿಷಯದಲ್ಲಿ ಜ್ಞಾನ ಹೊಂದಿ ಲೋಕದ ಮಲಿನತ್ವಗಳಿಗೆ ತಪ್ಪಿಸಿಕೊಂಡವರು ತಿರುಗಿ ಅವುಗಳಲ್ಲಿ ಸಿಕ್ಕಿಕೊಂಡರೆ ಅವರ ಅಂತ್ಯಸ್ಥಿತಿಯು ಮೊದಲಿಗಿಂತ ಕೆಟ್ಟದ್ದಾಗಿರುತ್ತದೆ. ಅವರು ನೀತಿ ಮಾರ್ಗವನ್ನು ತಿಳಿದೂ ತಮಗೆ ಕೊಡಲ್ಪಟ್ಟ ಪರಿಶುದ್ಧ ಆಜ್ಞೆಯಿಂದ ತೊಲಗಿಹೋಗುವುದಕ್ಕಿಂತ ಆ ಮಾರ್ಗವನ್ನು ತಿಳಿಯದಿದ್ದರೆ ಮೇಲಾಗಿತ್ತು. ನಾಯಿ ತಾನು ಕಕ್ಕಿದ್ದನ್ನು ನೆಕ್ಕುವುದಕ್ಕೆ ತಿರುಗಿಕೊಂಡಿತು ಮತ್ತು ತೊಳೆದ ಹಂದಿ ಕೆಸರಿನಲ್ಲಿ ಹೊರಳುವುದಕ್ಕೆ ಹೋಯಿತು ಎಂಬ ನಿಜವಾದ ಗಾದೆಗೆ ಸರಿಯಾಗಿ ನಡೆದಿದ್ದಾರೆ." (2 ಪೇತ್ರನು ಅಧ್ಯಾಯ 2)

*(ಪುಟ 4ರಲ್ಲಿ ಮುಂದುವರಿದಿದೆ)*

7 ಆದಿಕಾಂಡ 19:1-13, 24-25, ಯಾಜಕಕಾಂಡ 18:22, 20:13, ಧರ್ಮೋಪದೇಶಕಾಂಡ 22:5, 23:17-18, ನ್ಯಾಯಸ್ಥಾಪಕರು 19:22-28, 1 ಅರಸುಗಳು 14:24, 15:11-12, ಯೆಹೆಜ್ಕೇಲನು 16:49-50, ರೋಮಾಪುರದವರಿಗೆ 1:18-32, 1 ಕೊರಿಂಥದವರಿಗೆ 6:9-10, 1 ತಿಮೊಥೆಯನಿಗೆ 1:9-10, 2 ತಿಮೊಥೆಯನಿಗೆ 3:1-9, ಯೂದನು 7-8

## ಭಾರತ

ಕ್ರಿಸ್ತರಲ್ಲಿ ಪ್ರಿಯ ಸಹೋದರನೇ,

ಯೇಸು ಕ್ರಿಸ್ತರ ಹೆಸರಿನಲ್ಲಿ ನಮಸ್ಕಾರಗಳು. ನಾವು ನಿಮ್ಮ ಮಿನಿಸ್ಟ್ರಿಗಾಗಿ ಪ್ರಾರ್ಥಿಸುತ್ತಿದ್ದೇವೆ. ಮ್ಯಾಗಜೀನ್ ನಲ್ಲಿ ನಿಮ್ಮ ಸಂದೇಶವನ್ನು ಓದಿದ ನಂತರ ಇಲ್ಲಿ ಹಲವಾರು ಹಿಂದುಗಳು ದೇವರ ಕೃಪೆಯಿಂದ ಅದ್ಭುತವಾಗಿ ರಕ್ಷಣೆ ಹೊಂದಿದರು.

ಬೊಬ್ಬಿಲಂಕ ಗ್ರಾಮದಲ್ಲಿ, ಹೊಸದಾಗಿ ಮತಾಂತರಗೊಂಡವರಿಗಾಗಿ, ನಾವು ಭಾನುವಾರದಂದು ಮರದಡಿಯಲ್ಲಿ ಪ್ರಾರ್ಥನೆಯನ್ನು ನಡೆಸಿದೆವು. ನಮಗೆ ಒಂದು ಪ್ರಾರ್ಥನಾ ಮಂದಿರದ ಬಹಳ ಅವಶ್ಯಕತೆ ಇದೆ. ನಮ್ಮ ಆಧ್ಯಾತ್ಮಿಕ ಬೆಳವಣಿಗೆಯಲ್ಲಿ ದಯವಿಟ್ಟು ನಮಗೆ ನೆರವು ನೀಡಿ.

ಪ್ರಭುವು ನಿಮ್ಮನ್ನು ಸಮೃದ್ಧವಾಗಿ ಅನುಗ್ರಹಿಸಲಿ.

ಕ್ರಿಸ್ತರಲ್ಲಿ ನಿಮ್ಮ ಸಹೋದರ,

ಸೋಲ್ಮನ್ ರಾಜು ಕೋಲ — ಆಂಧ್ರ ಪ್ರದೇಶ, ಭಾರತ

# ಅಗಾಧ ದುಷ್ಟತನ

(ಪುಟ 3 ರಿಂದ ಮುಂದುವರಿದಿದೆ)

ಈ ಭವಿಷ್ಯವಾಣಿಯು ಈಗಾಗಲೆ ನಿಜವಾಗಿದೆ. ಕೋಟಿಗಟ್ಟಲೆ ಜನರು ಕ್ರಿಸ್ತರಿಂದ ದೂರವಾಗಿದ್ದಾರೆ, ಮತ್ತು ನನ್ನ ಮಾತಿನ ಅರ್ಥವೇನೆಂದರೆ ದೊಡ್ಡ ಮಟ್ಟಿನಲ್ಲಿ ಕ್ರಿಸ್ತರಿಂದ ದೂರಸರಿಯುವಿಕೆ, ಇದನ್ನು 2 ಥೆಸಲೋನಿಕದವರಿಗೆ 2:3ರಲ್ಲಿ ಉಲ್ಲೇಖಿಸಲಾಗಿರುವ ಕ್ರಿಸ್ತರ ಬರುವಿಕೆಯ ಕುರಿತಾದ ಭವಿಷ್ಯವಾಣಿಯಲ್ಲೂ ಹೇಳಲಾಗಿತ್ತು. ಭವಿಷ್ಯವಾಣಿಯು ಹೇಳುವುದೇನೆಂದರೆ, "ಯಾರೂ ಯಾವ ವಿಧದಲ್ಲಿಯೂ ನಿಮ್ಮನ್ನು ಮೋಸಗೊಳಿಸದಂತೆ ನೋಡಿಕೊಳ್ಳಿರಿ; ಯಾಕೆಂದರೆ ಮೊದಲು ಮತಭ್ರಷ್ಟತೆಯು ಉಂಟಾಗಿ ಅಧರ್ಮಸ್ವರೂಪನು ಬಯಲಿಗೆ ಬಂದ ಹೊರತು ಆ ದಿನವು [ಕ್ರಿಸ್ತರ ಹಿಂದಿರುಗುವಿಕೆ] ಬರುವುದಿಲ್ಲ." ಸಂಪೂರ್ಣ ಲೋಕವು ಸೈತಾನನನ್ನು ಆರಾಧಿಸುತ್ತಿದೆಯಾದರೆ, ಇದು ಕ್ರಿಸ್ತರಿಂದ ದೂರಸರಿಯುವಿಕೆಯ ಒಂದು ಸಂಕೇತವಾಗಬಹುದು ಎಂದು ನೀವು ಹೇಳುವಿರಲ್ಲವೇ? ಸುವಾರ್ತೆಯ ಬೋಧಕರೆಂದೆನಿಸಿಕೊಳ್ಳುವವರು ಮದುವೆಯ ನ್ಯಾಯಸಮ್ಮತ ವಯಸ್ಸನ್ನು ನಿರಾಕರಿಸುತ್ತಿದ್ದರೆ ಹಾಗೂ ಬೈಬಲ್ ನಲ್ಲಿರುವ ಇತರ ಹಲವಾರು ಸಿದ್ಧಾಂತಗಳನ್ನು ನಿರಾಕರಿಸಿ ಪೈಶಾಚಿಕ ಕ್ರಿಸ್ತ-ವಿರೋಧಿ ಸರ್ಕಾರ ಮತ್ತು ಅವರ ಹೊಸ ಕಾನೂನುಗಳನ್ನು ಅನುಸರಿಸುತ್ತಿದ್ದರೆ, ಇದು ಕ್ರಿಸ್ತರಿಂದ ದೂರಸರಿಯುವಿಕೆಯ ಒಂದು ಸಂಕೇತ ಎಂದು ನೀವು ಹೇಳುವಿರಲ್ಲವೇ? ಕ್ರಿಸ್ತರ ಸುವಾರ್ತಿಕರನ್ನು ಸುಳ್ಳು ಆಪಾದನೆಗಳ ಮೇಲೆ ಕಾರಾಗೃಹದಲ್ಲಿಟ್ಟಾಗ, ಮತ್ತು ಯಾರೂ ಅದರ ವಿರುದ್ಧ ಮಾತನಾಡದಿದ್ದಾಗ, ಇದು ಕ್ರಿಸ್ತರಿಂದ ದೂರಸರಿಯುವಿಕೆಯ ಒಂದು ಸಂಕೇತ ಎಂದು ನೀವು ಹೇಳುವಿರಲ್ಲವೇ?

ಟೆಕ್ಸಾಸ್ ನ ವ್ಯಾಕೊದಲ್ಲಿ ಮತ್ತು ವಿಶ್ವದೆಲ್ಲೆಡೆ ಇತರ ಹಲವಾರು ಕಡೆಗಳಲ್ಲಿ ಒಂದು ಸರ್ಕಾರ ಮಕ್ಕಳನ್ನು, ಅವರ ತಾಯಂದಿರನ್ನು ಮತ್ತು ಅವರ ತಂದೆಯರನ್ನು ಹತ್ಯೆ ಮಾಡಿದಾಗ, ಮತ್ತು ಅದರ ವಿರುದ್ಧ ಯಾರೂ ಮಾತನಾಡದಿದ್ದಾಗ, ಅದು ಕ್ರಿಸ್ತರಿಂದ ದೂರವಾಗುವುದರ ಒಂದು ಸಂಕೇತವನ್ನು ಸೂಚಿಸುತ್ತದೆ ಎಂದು ನೀವು ಹೇಳುವಿರಲ್ಲವೇ? ದೂರ ಸರಿದ ಕ್ರೈಸ್ತಮತೀಯರು ತಮ್ಮ ಪ್ಯಾಸ್ಟರುಗಳ ವಿರುದ್ಧ ತಿರುಗಿಬಿದ್ದು, ನ್ಯಾಯಾಂಗ ವ್ಯವಸ್ಥೆ ಮತ್ತು ಸರ್ಕಾರವು ತಮಗೆ ಒಳ್ಳೆಯ ಬಹುಮಾನವನ್ನು ಕೊಡುತ್ತದೆ ಮತ್ತು ಧರ್ಮನಿಷ್ಠರಾದ ಪ್ಯಾಸ್ಟರುಗಳನ್ನು ಆಜೀವಪರ್ಯಂತ ಕಾರಾಗೃಹದಲ್ಲಿಡಲಾಗುವುದು ಎಂದು ಚೆನ್ನಾಗಿ ಗೊತ್ತಿದ್ದರೂ ಪ್ಯಾಸ್ಟರುಗಳ ಬಗ್ಗೆ ಸುಳ್ಳು ಹೇಳಿ ಅವರನ್ನು ಮೋಸದಿಂದ ಒಪ್ಪಿಸಿದರೆ ಇದು ಕ್ರಿಸ್ತರಿಂದ ದೂರವಾಗುವುದರ ಸಂಕೇತ ಎಂದು ನೀವು ಹೇಳುವಿರಲ್ಲವೇ? ಜಗತ್ತಿನಾದ್ಯಂತ ನಗರಗಳ ಮೇಲೆ ಹಾರಾಡುತ್ತಿರುವ ಯುಎಫ್‌ಒಗಳನ್ನು ನೋಡಿ, ಭೂಮಿಯನ್ನು ನಾಶಮಾಡುವುದಕ್ಕೆ ಮೊದಲು ಅದರ ಸಮೀಕ್ಷೆಯನ್ನು ನಡೆಸುತ್ತಿರುವ ಆ ಅಲೌಕಿಕ ಜೀವಿಗಳು ದೇವದೂತರು[8] ಎಂದು ಜನರು ತಿಳಿದುಕೊಳ್ಳುವಾಗ ಅದು ಒಂದು ಸಂಕೇತ ಎಂದು ನೀವು ಹೇಳುವಿರಾ? ಈ ಯುಎಫ್‌ಒ ಗಳು ಬೇರೆ ಗ್ರಹಗಳಿಂದ ಬಂದವುಗಳು ಎಂದು ದೂರ ಹೋದ ಕ್ರೈಸ್ತಮತೀಯರು ಹೇಳುತ್ತಾರೆ. ಅವು ಪರಲೋಕದಿಂದ ಬಂದವು ಎಂದು ನಮಗೆ ತಿಳಿದಿರುವುದರಿಂದ, ತಾವು ಹೇಳುತ್ತಿರುವುದು ಸುಳ್ಳೆಂಬುದು ಅವರಿಗೆ ತಿಳಿದಿರುತ್ತದೆ. ಇದು ಕ್ರಿಸ್ತರಿಂದ ದೂರ ಸರಿಯುವುದರ ಒಂದು ಸಂಕೇತ ಎಂದು ನೀವು ಹೇಳುವಿರಲ್ಲವೇ?

ಅಧ್ಯಕ್ಷರು, ಅರಸರು, ಮತ್ತು ಚರ್ಚ್ ಎಂದು ಕರೆಸಿಕೊಳ್ಳುವವು ಸಲಿಂಗ ವಿವಾಹಗಳನ್ನು ಬೆಂಬಲಿಸುವುದನ್ನು ನೀವು ನೋಡಿದಾಗ, ಇದು ಕ್ರಿಸ್ತರಿಂದ ದೂರಸರಿಯುವಿಕೆಯ ಸಂಕೇತ ಎಂದು ನೀವು ಹೇಳುವಿರಲ್ಲವೇ? ನಿಮ್ಮ ಮಕ್ಕಳು ಸರಿಪಡಿಸಲಾಗದಷ್ಟು ಹಾಳಾಗುತ್ತಿದ್ದರೆ, ಬೈಬಲ್ ನಿಮಗೆ ಆದೇಶಿಸುವಂತೆ, ನೀವು ಅವರನ್ನು ಶಿಸ್ತಿಗೊಳಪಡಿಸುವಂತಿಲ್ಲ ಎಂದು ಒಂದು ವಿಶ್ವ ಸರ್ಕಾರ ನಿಮಗೆ ಹೇಳಿದಾಗ, ಅದು ಕ್ರಿಸ್ತರಿಂದ ದೂರಸರಿಯುವುದರ ಸಂಕೇತ ಎಂದು ನೀವು ಹೇಳುವಿರಲ್ಲವೇ? ಕ್ರಿಸ್ತ-ವಿರೋಧಿಗಳಾಗಿರುವ ಅಸಂತುಷ್ಟರಾದ ಮಾಜಿ ಕ್ರೈಸ್ತಮತೀಯರು ಹೇಳುವ ಸುಳ್ಳುಗಳ ಆಧಾರದ ಮೇಲೆ ಸರ್ಕಾರವು ನಿಮ್ಮ ಮಕ್ಕಳನ್ನು ಪೋಷಕರಿಂದ ಮತ್ತು ಧಾರ್ಮಿಕ ಚರ್ಚ್ ನಿಂದ ಕಸಿದುಕೊಂಡು ಅವರನ್ನು ಸಲಿಂಗ ಕಾಮಿಗಳಿಗೆ ಒಪ್ಪಿಸಿದಾಗ, ಇದು ಕ್ರೈಸ್ತರಿಂದ ದೂರ ಸರಿಯುವುದರ ಸಂಕೇತ ಎಂದು ನೀವು ಹೇಳುವಿರಲ್ಲವೇ? ಪುರುಷ ಸಲಿಂಗ ಕಾಮ ಮತ್ತು ಸ್ತ್ರೀ ಸಲಿಂಗ ಕಾಮ ಮೂರನೇ ಲೈಂಗಿಕ ಆಯ್ಕೆ, ವಿಕೃತ ಕಾಮಾಸಕ್ತಿಯ ಬದಲು ಒಂದು ರೋಗ ಎಂದು ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಹೇಳಿಕೊಡಲಾಗುವುದನ್ನು ಮತ್ತು ವ್ಯಾಟಿಕನ್ ವಿಶ್ವ ಸರ್ಕಾರವು ಈ ಪೈಶಾಚಿಕ, ಹುಚ್ಚು ಕಾರ್ಯನೀತಿಯನ್ನು ಬಲವಂತವಾಗಿ ಜಾರಿಗೊಳಿಸುವುದನ್ನು ನೀವು ನೋಡಿದಾಗ, ಇದು ಕ್ರಿಸ್ತರಿಂದ ದೂರ ಸರಿಯುವುದರ ಒಂದು ಸಂಕೇತ ಎಂದು ನೀವು ಹೇಳುವಿರಲ್ಲವೇ?

ಯು.ಎಸ್. ಸಂವಿಧಾನ ಇನ್ನು ಮುಂದೆ ಅನ್ವಯವಾಗುವುದಿಲ್ಲ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಫರ್ಸ್ಟ್ ಅಮೆಂಡ್ಮೆಂಟ್ ಇನ್ನು ಮುಂದೆ ಅನ್ವಯವಾಗುವುದಿಲ್ಲ, ಆದ್ದರಿಂದ ಕ್ರೈಸ್ತಮತೀಯರು ಇನ್ನು ಮುಂದೆ ಬೈಬಲ್ ಅನ್ನು ನಂಬಿ ಅದು ಹೇಳುವಂತೆ ಮಾಡಲು ಸಾಧ್ಯವಿಲ್ಲ ಎಂದು ಭ್ರಷ್ಟ ಕ್ರಿಸ್ತ-ವಿರೋಧಿ ಸರ್ಕಾರವು ಹೇಳುವುದನ್ನು ನೀವು ನೋಡಿದರೆ, ಇದು ಕ್ರಿಸ್ತರಿಂದ ದೂರ ಸರಿಯುವುದರ ಒಂದು ಸಂಕೇತ ಎಂದು ನೀವು ಹೇಳುವಿರಲ್ಲವೇ?

ನೀವು ಒಂದು ಛಾಯಾಗ್ರಣ ಅಥವಾ ಹೂವಿನ ಅಂಗಡಿಯ ಮಾಲೀಕರಾಗಿದ್ದು, ಸಲಿಂಗ ವಿವಾಹಗಳ ಛಾಯಾಗ್ರಹಣವನ್ನು ನೀವು ಮಾಡುವುದಿಲ್ಲ ಅಥವಾ ಅವರ ವಿಕೃತ ವಿವಾಹಗಳಿಗೆ ಹೂವಿನ ಅಲಂಕಾರ ಮಾಡುವುದಿಲ್ಲ ಎಂದು ನೀವು ಸಲಿಂಗಕಾಮಿ ಜೋಡಿಗಳಿಗೆ ಹೇಳಿದರೆ, ಸರ್ಕಾರವು ವಿಕೃತಿಯನ್ನು ನಿಮ್ಮ ಮೇಲೆ ಬಲವಂತವಾಗಿ ಹೇರುತ್ತದೆ ಮತ್ತು ನೀವು ಯಾರಿಗೆ ಸೇವೆಗಳನ್ನು ಒದಗಿಸುತ್ತೀರಿ ಮತ್ತು ಯಾರಿಗೆ ಒದಗಿಸುವುದಿಲ್ಲ ಎಂದು ಭೇದಭಾವ ತೋರಿಸುವ ಹಕ್ಕು ಇನ್ನು ಮುಂದೆ ನಿಮಗಿಲ್ಲ. ನೀವು ಇದನ್ನು ಕ್ರಿಸ್ತರಿಂದ ದೂರ ಸರಿಯುವುದರ ಒಂದು ಸಂಕೇತ, ಸ್ವತಂತ್ರರ ನಮ್ಮ ನಾಡು ಮತ್ತು ವೀರರ ನೆಲೆಯ ಅಂತ್ಯವೆಂದು ನೀವು ಹೇಳುವಿರಲ್ಲವೇ? ನೀವು ಇಂದು ನೋಡುತ್ತಿರುವ ನ್ಯಾಯದ ಈ ಎಲ್ಲಾ ಭ್ರಷ್ಟ ಅಪಪ್ರಯೋಗಗಳಿಗೆ ರೋಮನ್ ಕ್ಯಾಥೊಲಿಕ್ ಚರ್ಚ್ ಕುಪಂಥದ ಸರ್ಕಾರಿ ಮಾಧ್ಯಮಗಳು ಕಾರಣ. ಮತ್ತು ನಾನು ಈಗ ಹೇಳಿರುವುದು ಹಿಮಗುಡ್ಡದ ತುದಿ, ಪ್ರತ್ಯಕ್ಷಾಂಶ ಮಾತ್ರ ಆಗಿದೆ.

ನೀವು ಇದನ್ನು ಸಹಿಸಲಾರದ ದುಷ್ಟತನ ಎಂದು ಕರೆಯುವುದಿಲ್ಲವೆ? ಇದುವೆ ಯು.ಎನ್. ಕ್ರಿಸ್ತ-ವಿರೋಧಿ ಸರ್ಕಾರವಲ್ಲವೆ? ಇದನ್ನು ಮೇಲಿನಿಂದ ಸುರಿದು ಕೆಳಗೆ ಹೂತಿಡುವುದು ಎಂದು ಕರೆಯುವುದಿಲ್ಲವೆ? ಸರ್ಕಾರವು ನಿಮ್ಮ ಸ್ವಾತಂತ್ರ್ಯದ ಹುಟ್ಟಡಗಿಸುವುದು ಮತ್ತು ಸೋಲಿಸುವುದು ಎಂದರೆ ಇದೇ ಅಲ್ಲವೆ?

ಕ್ರಿಸ್ತರ ಬರುವಿಕೆಗೆ ನಾವು ಎಷ್ಟು ಹತ್ತಿರವಿದ್ದೇವೆ ಎಂದು ಕಂಡುಹಿಡಿಯಲು ನೀವು ಪ್ರಯತ್ನಿಸುತ್ತಿದ್ದರೆ ಬೈಬಲ್ ಓದಿ. ಥೆಸಲೋನಿಕದವರಿಗೆ 2:3 ಹೇಳುವಂತೆ, ಯಾವ ಮನುಷ್ಯನೂ ನಮಗೆ ಮೋಸ ಮಾಡದಂತೆ ನಾವು ನೋಡಿಕೊಳ್ಳಬೇಕು. ಮುಂದೆ ಅದು ಹೀಗೆಂದು ಹೇಳುತ್ತದೆ, "ಯಾಕಂದರೆ ಮೊದಲು ಮತಭ್ರಷ್ಟತೆಯು ಉಂಟಾಗಿ ಅಧರ್ಮಸ್ವರೂಪನು ಬಯಲಿಗೆ ಬಂದ ಹೊರತು ಆ ದಿನವು ಬರುವದಿಲ್ಲ."

ಇಬ್ಬರು ಮನುಷ್ಯರಿದ್ದಾರೆ ಎಂದು ಬೈಬಲ್ ನಮಗೆ ಹೇಳುತ್ತದೆ; ಒಬ್ಬನು ಮೊದಲನೆಯ ಆದಾಮನು, ಮತ್ತು ಎರಡನೆಯವನು ಕೊನೆಯ ಆದಾಮನು, ಆತನೇ ಕ್ರಿಸ್ತನು (1 ಕೊರಿಂಥದವರಿಗೆ 15:45-47). ಜನರು ಒಂದೋ ಕೊನೆಯ ಆದಾಮನಾದ ಕ್ರಿಸ್ತರಲ್ಲಿದ್ದಾರೆ, ಅಥವಾ ಮೊದಲನೆಯ ಆದಾಮನಲ್ಲಿದ್ದು, ನರಕ ಮತ್ತು ಬೆಂಕಿಯ ಕೆರೆಯ ದಾರಿಯಲ್ಲಿದ್ದಾರೆ.[9]

ಅಧರ್ಮಸ್ವರೂಪನಾದವನ ಬಗ್ಗೆ ಮಾತನಾಡುವ ಈ ಗ್ರಂಥವು ಮೋಸಹೋಗಿರುವ ಸಂಪೂರ್ಣ ಲೋಕದ ಬಗ್ಗೆ ಮಾತನಾಡುತ್ತಿದೆ. ಆದ್ದರಿಂದ, ಸೈತಾನನನ್ನು ಪೂಜಿಸುವವರು ಮೊದಲನೆಯ ಆದಾಮನ ಸದಸ್ಯರಾಗಿದ್ದಾರೆ. ನರಕ ಮತ್ತು ಬೆಂಕಿಯ ಕೆರೆಗೆ ಹೋಗುವವರು ಅವರಾಗಿದ್ದಾರೆ. "ಈ ಮೃಗಕ್ಕೆ ಸಮಾನರು ಯಾರು? ಇದರ ಮೇಲೆ ಯುದ್ಧ ಮಾಡುವುದಕ್ಕೆ ಯಾರು ಶಕ್ತರು" (ಪ್ರಕಟನೆ 13:4) ಎಂದು ಹೇಳುತ್ತಿರುವವರು ಅವರೇ. ನೋಹನ ದಿನದಲ್ಲಿ ದೇವರು ಲೋಕದ ಜನರೊಡನೆ ಮಾಡಿದಂತೆ, ಈ ಎಲ್ಲಾ ದುಷ್ಟ ಜನರನ್ನು ಒಂದು ಬಲವಾದ ಹೊಡೆತ, ಒಂದು ಅಪ್ಪಳಿಸುವಿಕೆಯಿಂದ ನಾಶ ಮಾಡುವ ಸಾಮರ್ಥ್ಯವನ್ನು ದೇವರು ಹೊಂದಿರುವುದಕ್ಕೆ ಆತನಿಗೆ ಗೌರವ ಕೊಡುವುದಿಲ್ಲ.[10] ಬರೀ ಮಣ್ಣಿನಿಂದ[11] ಆತ ಸೃಷ್ಟಿಸಿದ ಈ ಎಲ್ಲಾ ಜೀವಿಗಳನ್ನು ದೇವರು ಬೆಂಕಿಯಿಂದ[12] ನಾಶ ಮಾಡುತ್ತಾರೆ.

ದೇವರು ಮಣ್ಣಿನಿಂದ ಸೃಷ್ಟಿಸಿದ ಈ ಮೊದಲನೆಯ ಆದಾಮನು "ಯಾವುದು ದೇವರೆನಿಸಿಕೊಳ್ಳುತ್ತದೋ ಯಾವುದು ಪೂಜೆ ಹೊಂದುತ್ತದೋ ಅದನ್ನೆಲ್ಲಾ ಎದುರಿಸಿ ಅದಕ್ಕಿಂತ ಮೇಲಾಗಿ ತನ್ನನ್ನು ತಾನೇ ಹೆಚ್ಚಿಸಿಕೊಂಡು ತಾನು ದೇವರೆಂದು

**8** ಆದಿಕಾಂಡ 19:1, 13, 2 ಸಮುವೇಲನು 24:15-16, 2 ಅರಸುಗಳು 19:35, 2 ಪೂರ್ವಕಾಲವೃತ್ತಾಂತ 32:21, ಕೀರ್ತನೆಗಳು 78:49, ಮತ್ತಾಯ 13:41-42, ಅಪೋಸ್ತಲರ ಕೃತ್ಯಗಳು 12:23, 2 ಥೆಸಲೋನಿಕದವರಿಗೆ 1:7-10, ಪ್ರಕಟನೆ 7:1-2, 9:15, 15:1 **9** 1 ಕೊರಿಂಥದವರಿಗೆ 15:21-22, 44-50 **10** ಆದಿಕಾಂಡ 6:11-13, 7:4-23 **11** ಆದಿಕಾಂಡ 2:7, 3:19, 18:27, ಯೋಬನು 10:9, 34:15, ಕೀರ್ತನೆಗಳು 103:14, 104:29, ಪ್ರಸಂಗಿ 3:20, 12:7 **12** ಮಲಾಕಿಯನು 3:2, ಮತ್ತಾಯ 3:10, 12, 13:41-42, 25:41, ಯೋಹಾನ 15:6, 2 ಥೆಸಲೋನಿಕದವರಿಗೆ 1:6-9, 2 ಪೇತ್ರನು 3:3-12, ಯೂದನು 7, ಪ್ರಕಟನೆ 14:10, 19:20, 20:10, 15, 21:8

ಹೇಳಿಕೊಂಡು ದೇವರ ಗರ್ಭಗುಡಿಯಲ್ಲೇ ಕೂತುಕೊಳ್ಳುತ್ತಾನೆ [ದೇವರ ಆಲಯದ ಈ ಸದಸ್ಯರು ಈಗ ಸೈತಾನನ ಆಲಯವಾಗಿರುವವರಾಗಿದ್ದಾರೆ. ಸೈತಾನನು, ತನ್ನ ಆತ್ಮದಿಂದ, ದೇವರ ಆಲಯದ ಈ ಹಿಂದಿನ ಸದಸ್ಯರಲ್ಲಿ, ಕ್ರಿಸ್ತವಿರೋಧಿಗಳಾಗಿರುವವರಲ್ಲಿ ವಾಸಿಸುತ್ತಾನೆ. ಅವರು ದೂರ ಸರಿಯುವ ಮೊದಲು, ದೇವರ ಆಲಯದ ಭಾಗವಾಗಿದ್ದರು. ಆತ್ಮದಿಂದ ಪುನರ್ಜನ್ಮ ಪಡೆದಿರುವವರಿಗೆ, ದೇವರ ಆಲಯವಾಗಿ ಉಳಿದಿರುವ ನಮಗೆ, ಗ್ರಂಥವು ಹೀಗೆಂದು ಹೇಳುತ್ತದೆ, 'ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ?' (1 ಕೊರಿಂಥದವರಿಗೆ 3:16) ಆದರೆ ಒಂದು ಸಮಯದಲ್ಲಿ ದೇವರ ಆಲಯವಾಗಿದ್ದವರು, ಒಂದು ಸಮಯದಲ್ಲಿ ದೇವರು ತನ್ನ ಆತ್ಮದಲ್ಲಿ ವಾಸವಾಗಿದ್ದ ಸ್ಥಳವಾಗಿದ್ದವರು ದೂರ ಸರಿದಿದ್ದಾರೆ, ಮತ್ತು ಸೈತಾನನು ಅವರನ್ನು ಪ್ರವೇಶಿಸಲು ಅವಕಾಶ ನೀಡಿದ್ದಾರೆ. ಅವರು ವಂಚನೆಗೊಳಗಾಗಿರುವ ಸಂಪೂರ್ಣ ಲೋಕ, ಘಟಸರ್ಪವನ್ನು, ಪಿಶಾಚನನ್ನು ಪೂಜಿಸುವವರು (ಪ್ರಕಟನೆ 12:9) ಆಗಿದ್ದಾರೆ. ಪುನಃ, ಅವರು ಕ್ರಿಸ್ತ-ವಿರೋಧಿಗಳಾಗಿದ್ದಾರೆ, ಏಕೀಕೃತ ಒಂದು-ವಿಶ್ವ ಸರ್ಕಾರ, ವಂಚನೆಗೊಳಗಾಗಿರುವ ಜನರ ಜೊತೆಗೂಡಿ ಈಗ]ತಾನು [ಅವರೊಂದಿಗೆ ಜೊತೆಗೂಡಿ] ದೇವರು ಎಂದು ತಾನೇ ತೋರಿಸಿಕೊಳ್ಳುತ್ತಿದೆ [ಸೈತಾನನು ದೇವರ ಕಾನೂನುಗಳನ್ನು, ಇಂದು ಇರುವಂತೆ, ವಿಪರೀತ ವಿಕೃತಿಗೆ ಬದಲಾಯಿಸುತ್ತಾನೆ[13], ಮತ್ತು ಕುರಿಯಾದಾತನ ಜೀವಬಾಧ್ಯರ ಪಟ್ಟಿಯಲ್ಲಿ ಯಾರ ಹೆಸರು ಇದೆಯೋ ಅವರನ್ನು ಹೊರತುಪಡಿಸಿ, ಇತರರನ್ನು, ಸಲಿಂಗ ವಿವಾಹಗಳಿಗೆ, ಗರ್ಭಪಾತ (ಕೊಲೆ), ಹಾದರ, ವ್ಯಭಿಚಾರಗಳಿಗೆ ಮನ್ನಣೆ ನೀಡಲು, ಮತ್ತು ವಿವಾಹಕ್ಕೆ ಅವಮರ್ಯಾದೆ ಮಾಡಲು ಬಲವಂತಪಡಿಸುತ್ತಾರೆ, ಮತ್ತು ಆತನ ಪದವನ್ನು, ಆತನ ಕಾನೂನುಗಳನ್ನು, ಆತನ ಕಟ್ಟಳೆಗಳನ್ನು, ಮತ್ತು ಆತನ ಆಜ್ಞೆಗಳನ್ನು ನಿರಾಕರಿಸುವ ಮೂಲಕ ದೇವದೂಷಣೆ ಮಾಡುತ್ತಾರೆ.]" (2 ಥೆಸಲೋನಿಕದವರಿಗೆ 2:4).

5 ರಿಂದ 12ರ ವರೆಗಿನ ಶ್ಲೋಕಗಳಲ್ಲಿ ಅಪೋಸ್ತಲ ಪೌಲನು ಪವಿತ್ರಾತ್ಮನ ಮೂಲಕ ಹೀಗೆಂದು ಹೇಳುತ್ತಾನೆ, "ನಾನು ನಿಮ್ಮ ಸಂಗಡ ಇದ್ದಾಗ ಈ ಸಂಗತಿಗಳನ್ನು ಹೇಳಿದ್ದು ಜ್ಞಾಪಕವಿಲ್ಲವೋ? ಇದಲ್ಲದೆ ಆ ಮನುಷ್ಯನು ಬಟಾಬಯಲಾಗುವುದಕ್ಕೆ ಏನಡ್ಡಿ ಎಂಬುದು ನಿಮಗೆ ಗೊತ್ತೇ ಇದೆ. [ಈ ಕ್ರಿಸ್ತವಿರೋಧಿಯನ್ನು ಬಹಿರಂಗಪಡಿಸುವ ತನಕ ದೇವರು ಈ ಜನರನ್ನು ನಾಶ ಮಾಡುವುದನ್ನು ತಡೆಹಿಡಿದಿದ್ದಾರೆ, ಮತ್ತು ಈಗ ಅವನನ್ನು ಬಹಿರಂಗಪಡಿಸಲಾಗಿದೆ. ಈಗ ಲೋಕದ ಜನರಾದ ನಿಮಗೆ ಈ ಪಾಪಕ್ಕಾಗಿ ಮತ್ತು ನಿಮ್ಮ ಎಲ್ಲಾ ಪಾಪಗಳಿಗಾಗಿ ಪಶ್ಚಾತ್ತಾಪಪಡದಿರುವುದಕ್ಕೆ ಯಾವುದೇ ನೆಪ ಇಲ್ಲ.].

"ಅಧರ್ಮವು ಈಗಲೂ ಗುಪ್ತವಾಗಿ ತನ್ನ ಕಾರ್ಯವನ್ನು ಸಾಧಿಸುತ್ತದೆ; ಆದರೆ ಇದುವರೆಗೆ ಅಡ್ಡಿ ಮಾಡುವವನು ತೆಗೆದುಬಿಡಲ್ಪಡುವ ತನಕ ಅದು ಗುಪ್ತವಾಗಿಯೇ ಇರುವುದು. ಅವನು ತೆಗೆದುಬಿಡಲ್ಪಟ್ಟ ಕೂಡಲೆ ಆ ಅಧರ್ಮಸ್ವರೂಪನು ಕಾಣಬರುವನು; ಅವನನ್ನು ಯೇಸು ಕರ್ತನು ತನ್ನ ಬಾಯ ಉಸಿರಿನಿಂದ ಕೊಲ್ಲುವನು, ತನ್ನ ಪ್ರತ್ಯಕ್ಷತೆಯ ಪ್ರಕಾಶದಿಂದ ಸಂಹರಿಸುವನು. ಆ ಅಧರ್ಮಸ್ವರೂಪನ ಪ್ರತ್ಯಕ್ಷತೆಯು ಸೈತಾನನ ಮಾಟಕ್ಕನುಗುಣವಾಗಿರುವುದು. ಅದು ಮೋಸಗೊಳಿಸುವ ಸಕಲವಿಧವಾದ ಮಹತ್ಕಾರ್ಯ ಸೂಚಕ ಕಾರ್ಯ ಅದ್ಭುತ ಕಾರ್ಯ ಇವುಗಳಿಂದಲೂ ದುರ್ನೀತಿಯ ಎಲ್ಲಾ ವಂಚನೆಯಿಂದಲೂ ಕೂಡಿ ನಾಶನ ಮಾರ್ಗದಲ್ಲಿರುವವರಿಗೋಸ್ಕರ ಸಂಭವಿಸುವುದು. [ಇದು, ಸೈತಾನನು ನರಕಕ್ಕೆ ಮತ್ತು ಬೆಂಕಿಯ ಕೆರೆಗೆ ಕಳುಹಿಸಲ್ಪಡುವುದಕ್ಕಿಂತ ಮೊದಲು ಅವನ ಕೊನೆಯ ಪ್ರಯತ್ನವಾಗಿದೆ, ಆದ್ದರಿಂದ ಅವನು ನಿಜವಾಗಿಯೂ ಸಂಪೂರ್ಣ ವಿಶ್ವದಲ್ಲಿ ಅತ್ಯಂತ ದುರ್ಬಲ ವ್ಯಕ್ತಿಯಾಗಿದ್ದರೂ, ತಾನು ಸರ್ವಶಕ್ತನು ಎಂದು ಜನರು ನಂಬುವಂತೆ ಮಾಡುತ್ತಾ ಅವರನ್ನು ಕುಗ್ಗಿಸಲು ತನಗೆ ಸಾಧ್ಯವಾದುದೆಲ್ಲವನ್ನು ಮಾಡುತ್ತಿದ್ದಾನೆ.[14] ಆದರೂ ಬಿಲಿಯಗಟ್ಟಲೆ ಆತ್ಮಗಳು ತನ್ನೊಂದಿಗೆ ನರಕದಲ್ಲಿ, ನಂತರ ಬೆಂಕಿಯ ಕೆರೆಯಲ್ಲಿ ಶಾಶ್ವತತೆಯನ್ನು ಕಳೆಯುವಂತೆ ಅವನು ಮಾಡಿದ್ದಾನೆ.]

"ಮತ್ತು ಅವರಲ್ಲಿನ ನಾಶವಾಗುವ ಅಧರ್ಮಸ್ವರೂಪವಾದ ಎಲ್ಲ ವಂಚನೆಯೊಂದಿಗೆ; ಅವರು ಸತ್ಯದ ಮೇಲೆ ಪ್ರೀತಿಯನ್ನಿಡದ ಕಾರಣ ರಕ್ಷಣೆಯನ್ನು ಹೊಂದದೆ ನಾಶವಾಗುತ್ತಾರೆ. ['ಯಾವುದರಿಂದ ರಕ್ಷಣೆ?' ಎಂದು ಕೆಲವರು ಕೇಳಬಹುದು. ಅದಕ್ಕೆ ಉತ್ತರ: ಎಂದೂ ಯಾವುದೇ ಪರಿಹಾರವಿಲ್ಲದೆ ಬೆಂಕಿ, ಗಂಧಕ ಮತ್ತು ಲಾವದಲ್ಲಿ ನಿರಂತರವಾಗಿ ಕುದಿಸಲ್ಪಡುವ ಮತ್ತು ಹುರಿಯಲ್ಪಡುವ ನಿರಂತರತೆಯಿಂದ ದೂರವಿಡುವ ರಕ್ಷಣೆ. ನೋವಿನ ಮಾತ್ರೆಗಳಿಲ್ಲ, ನೀರಿಲ್ಲ, ಮತ್ತು ಮಂಜುತಂಪಾದ ಪಾನೀಯಗಳಿಲ್ಲ. ಆಹಾರವಿಲ್ಲ, ನೆರಳಿಲ್ಲ, ಮತ್ತು ಒಂದೇ ಒಂದು ಕ್ಷಣ ವಿರಾಮವಿಲ್ಲ. ನೀವು ರಕ್ಷಣೆಯನ್ನು ಬಯಸಬೇಕಾಗಿರುವುದು ಅವುಗಳಿಂದಲೇ. ನಿಮ್ಮಲ್ಲಿ ಸ್ವಲ್ಪವಾದರೂ ಬುದ್ಧಿ ಇದ್ದರೆ, ನೀವು ರಕ್ಷಣೆ ಹೊಂದುವಿರಿ!] ಅದೇ ಕಾರಣದಿಂದ ದೇವರು ಅಸತ್ಯ ನುಡಿಸುವ ಪ್ರಬಲ ಭ್ರಮೆಯನ್ನು ಅವರಲ್ಲಿಗೆ ಕಳುಹಿಸಿ ಆ ಸುಳ್ಳನ್ನು ನಂಬುವುದಕ್ಕೆ ಅವರನ್ನು ಬಿಡುತ್ತಾನೆ [ಸಂಪೂರ್ಣ ಲೋಕವು ಖಂಡಿತವಾಗಿ ಸುಳ್ಳನ್ನು ನಂಬುತ್ತದೆ, ಇಲ್ಲದಿದ್ದರೆ ಸಂಪೂರ್ಣ ಲೋಕವು ಮೋಸ ಹೋಗುತ್ತಿರಲಿಲ್ಲ, ಮತ್ತು ಪಿಶಾಚನಾದ, ಮೃಗವಾದ, ಯು.ಎನ್. ವಿಶ್ವ ಸರ್ಕಾರವಾದ ಸೈತಾನನನ್ನು ಸಂಪೂರ್ಣ ಲೋಕವು, ಈಗ ಮಾಡುತ್ತಿರುವಂತೆ, ಪೂಜಿಸುತ್ತಿರಲಿಲ್ಲ]. ಸತ್ಯವನ್ನು ನಂಬದೆ ಅನೀತಿಯಲ್ಲಿ ಆನಂದಪಡುವವರೆಲ್ಲರೂ ಈ ಪ್ರಕಾರ ನ್ಯಾಯತೀರ್ಪಿಗೆ ಒಳಗಾಗುವರು" (2 ಥೆಸಲೋನಿಕದವರಿಗೆ 2:5-12).

ಯೋಹಾನನು ಬರೆದ ಎರಡನೆಯ ಪತ್ರಿಕೆ 6-11 ಹೀಗೆಂದು ಹೇಳುತ್ತದೆ, "ದೇವರ ಆಜ್ಞೆಗಳನ್ನು ಅನುಸರಿಸಿ ನಡೆಯುವುದೇ ಪ್ರೀತಿ; ಪ್ರೀತಿಯಲ್ಲಿ ನಡೆಯಬೇಕೆಂಬುದೇ ನೀವು ಮೊದಲಿಂದಲೂ ಕೇಳಿದ ಅಪ್ಪಣೆಯಾಗಿದೆ. ಮನುಷ್ಯನಾಗಿ ಬಂದಿರುವ ಯೇಸು ಕ್ರಿಸ್ತನನ್ನು ಒಪ್ಪದೆ ಇರುವ ಮೋಸಗಾರರು ಅನೇಕ ಮಂದಿ ಹೊರಟು ಲೋಕದೊಳಗೆ ಹೋಗಿದ್ದಾರೆ. ಯೇಸುವನ್ನು ಒಪ್ಪದವನು ಮೋಸಗಾರನೂ ಕ್ರಿಸ್ತವಿರೋಧಿಯೂ ಆಗಿದ್ದಾನೆ. ನಾವು ಪ್ರಯಾಸಪಟ್ಟು ಮಾಡಿದವುಗಳನ್ನು ನೀವು ಕಳೆದುಕೊಳ್ಳದೆ ಪೂರ್ಣಫಲವನ್ನು ಹೊಂದುವಂತೆ ಜಾಗರೂಕರಾಗಿರಿ. ಕ್ರಿಸ್ತನ ಉಪದೇಶದಲ್ಲಿ ನೆಲೆಗೊಳ್ಳದೆ ಅದನ್ನು ಅತಿಕ್ರಮಿಸಿ ಮುಂದಕ್ಕೆ ಹೋಗುವವನಿಗೆ ದೇವರ ಅನ್ಯೋನ್ಯತೆಯಿಲ್ಲ. ಆ ಉಪದೇಶದಲ್ಲಿ

*(ಪುಟ 6ರಲ್ಲಿ ಮುಂದುವರಿದಿದೆ)*

**13** ದಾನಿಯೇಲನು 7:23-25, ಮತ್ತಾಯ 5:17-18

**14** ಯೆಶಾಯ 14:12-20, ಪ್ರಕಟನೆ 12:12

## ಪಾಲ್ ಬೋಲ್ಲಾ ಅವರ ಸಾಕ್ಷಿ

32 ವರ್ಷದವನಾಗಿದ್ದಾಗ ನಾನು ಆತ್ಮಹತ್ಯಾ ಪ್ರವೃತ್ತಿಯುಳ್ಳವನಾಗಿದ್ದೆನು, ಆತ್ಮಘಾತುಕನಾಗಿದ್ದೆನು, ಮತ್ತು ಕಳೆದುಹೋಗಿದ್ದೆನು ಮತ್ತು ಹಾಳಾಗಿದ್ದೆನು ಎಂಬುದು ನನ್ನ ಸಾಕ್ಷಿಯಾಗಿದೆ. ನಾನು ವಿಚ್ಛೇದಿತನಾಗಿದ್ದೆನು ಮತ್ತು ಏಳು ವರ್ಷಗಳಿಂದ ಮಿಲಿಟರಿಯಿಂದ ಹೊರಗಿದ್ದೆನು. ಅದಕ್ಕೂ ಮೊದಲು 26 ವರ್ಷದವನಾಗಿದ್ದಾಗ, ನಾನು ಸಂತೋಷದಿಂದ ವಿವಾಹಿತನಾಗಿದ್ದೆನು ಮತ್ತು ಆರೋಗ್ಯವಂತ ಗಂಡು ಮಗು ಬಂದಿತ್ತು, ಕೇರಿಯಲ್ಲಿ ಏಕೈಕ ಹೊಸ ಮನೆ ಮತ್ತು ಗ್ಯಾರೇಜ್ ನಲ್ ಎರಡು ಹೊಸ ಕಾರುಗಳಿದ್ದವು. ಒಂದು ರಾತ್ರಿ ತಡವಾಗಿ ನನ್ನ ಹೆಂಡತಿ ಮತ್ತು ನಾನು ಎದ್ದು ಕೂತಿದ್ದೆವು. ನಮ್ಮ ಪಕ್ಕದ ಮನೆಯವರು ತಮ್ಮ ಅಂಗಳವನ್ನು ವಿಸ್ತರಿಸುತ್ತಿದ್ದರು. ಆದ್ದರಿಂದ ನಮ್ಮ ಅಂಗಳವನ್ನು ವಿಸ್ತರಿಸಲು ಹಣ ಎಲ್ಲಿಂದ ಒಟ್ಟುಗೂಡಿಸುವುದು ಎಂದು ಆಲೋಚಿಸುತ್ತಿದ್ದೆವು. ಆಗಲೆ ನನ್ನ ಬದುಕು ಬಿಚ್ಚಲು ಪ್ರಾರಂಭವಾಯಿತು. ನನ್ನ ಬದುಕು ಎಲ್ಲಿ ಹೋಗುತ್ತಿದೆ ಎಂದು ನಾನು ಪ್ರಶ್ನಿಸಿದೆ. ಏನು? ನಗರದಾಚೆ ಇನ್ನೂ ಒಳ್ಳೆಯ ಮನೆ ಮತ್ತು ಇನ್ನೂ ದೊಡ್ಡ ಅಡಮಾನದ ಸಾಲಕ್ಕೆ ಬದಲಾಯಿಸುವುದೆ? ಅಷ್ಟೆಯೇ?



ಸಹೋದರ ಪಾಲ್ ಬೋಲ್ಲಾ

ನನ್ನ ಬದುಕಿನ ಈ ಹಂತದ ವರೆಗೆ, ನಾನು ಅಮೇರಿಕನ್ ಕನಸಿನಲ್ಲಿ ಸಂಪೂರ್ಣವಾಗಿ ಮುಳುಗುಹೋಗಿದ್ದೆ: ಮಿಲಿಟರಿ, ಕಾಲೇಜ್, ಮದುವೆ, ಕುಟುಂಬ, ಮತ್ತು ವೃತ್ತಿ; ಮತ್ತು ಸುಮಾರು ಆರು ತಿಂಗಳುಗಳಲ್ಲಿ ಎಲ್ಲವೂ ಮಾಯವಾಗಿತ್ತು. ಐದು ವರ್ಷಗಳ ನಂತರ, ನಾನು ಒಂದು ಸಂಪೂರ್ಣ ವರ್ಷವನ್ನು ವ್ಯಾಪಕವಾದ ಮಾನಸಿಕ ಚಿಕಿತ್ಸೆಯಲ್ಲಿ, ವಾರಕ್ಕೊಮ್ಮೆ ಇಬ್ಬರು ಬೇರೆ ಬೇರೆ ಚಿಕಿತ್ಸಕರನ್ನು ಭೇಟಿ ಮಾಡುತ್ತಾ ಕಳೆದೆನು. ಮಾತ್ರವಲ್ಲ, ಆ ವರ್ಷದಲ್ಲಿ, ಪ್ರತಿ ವಾರ ಒಂದು ಸ್ವಯಂ ಸುಧಾರಣಾ ಪುಸ್ತಕವನ್ನು ಓದುವುದು ನನ್ನ ಗುರಿಯಾಗಿತ್ತು, ಮತ್ತು ನಾನು ಹಾಗೆಯೇ ಮಾಡಿದೆನು. ನಾನು ಗುಣವಾಗಲು ಮತ್ತು ನನ್ನನ್ನು ಸರಿಪಡಿಸಿಕೊಳ್ಳಲು

*(ಪುಟ 7ರಲ್ಲಿ ಮುಂದುವರಿದಿದೆ)*

# ಅಗಾಧ ದುಷ್ಟತನ

(ಪುಟ 5 ರಿಂದ ಮುಂದುವರಿದಿದೆ)

ನೆಲೆಗೊಂಡಿರುವವನಿಗೆ ತಂದೆಯ ಮತ್ತು ಮಗನ ಅನ್ಯೋನ್ಯತೆ ಉಂಟು. ಈ ಉಪದೇಶಕ್ಕೆ ಒಪ್ಪದಿರುವ ಯಾವನಾದರೂ ನಿಮ್ಮ ಬಳಿಗೆ ಬಂದರೆ ಅವನನ್ನು ಮನೆಯೊಳಗೆ ಸೇರಿಸಿಕೊಳ್ಳಬೇಡಿರಿ, ಅವನಿಗೆ ಶುಭವಾಗಲಿ ['ಶುಭ ಪ್ರಯಾಣ' ಎಂದು ಹರಸುವುದು] ಎಂದು ಹೇಳಬೇಡಿರಿ. [ನೀವು ಅವರೊಂದಿಗೆ ವ್ಯವಹರಿಸುವುದು ಪ್ರಭುವಿಗೆ ಇಷ್ಟವಾಗುವುದಿಲ್ಲ ಎಂದು ನನಗೆ ಖಂಡಿತವಾಗಿ ತಿಳಿದಿದೆ, ಆದ್ದರಿಂದ ನೀವು ಯಾರೊಂದಿಗೆ ವ್ಯವಹರಿಸುತ್ತೀರಿ ಎಂಬುದನ್ನು ಆರಿಸಿಕೊಳ್ಳುವ ಆಯ್ಕೆಯನ್ನು ಪ್ರಭುವು ನಿಮಗೆ ಕೊಟ್ಟಿದ್ದಾರೆ.] ಅವನಿಗೆ ಶುಭವಾಗಲಿ ಎಂದು ಹೇಳುವವನು ಅವನ ದುಷ್ಕೃತ್ಯಗಳಲ್ಲಿ ಪಾಲುಗಾರನಾಗುತ್ತಾನೆ.

ಆದ್ದರಿಂದ ನೀವು ಅವರಿಗೆ "ಶುಭವಾಗಲಿ" ಎಂದು ಹೇಳಿದರೆ, ಸಲಿಂಗಕಾಮಿಗಳು ಮತ್ತು ಇತರ ಪಶ್ಚಾತ್ತಾಪಪಡದ ಪಾಪಿಗಳು ಪಡೆಯುವ ಅದೇ ಶಿಕ್ಷೆಯನ್ನು ನೀವೂ ಪಡೆಯುವಿರಿ, ಅದೇನೆಂದರೆ, ಯಾವುದೇ ಪರಿಹಾರವಿಲ್ಲದೆ, ಗಂಟಲು ಹರಿಯುವಷ್ಟು ಕೂಗಿಕೊಂಡು, ನರಕದಲ್ಲಿ ಸುಡುವ ನಿರಂತರತೆ ಮತ್ತು ಬೆಂಕಿಯ ಕೆರೆಯಲ್ಲಿ ನಿರಂತರತೆ. ನೀವು ಸಲಿಂಗಕಾಮಿಗಳೊಂದಿಗೆ ಮತ್ತು ಗರ್ಭಪಾತ ಮಾಡುವವರೊಂದಿಗೆ (ಕೊಲೆಗಾರರೊಂದಿಗೆ) ಸ್ನೇಹ ಬೆಳೆಸಬೇಕೆಂದು ಸೈತಾನನು ಬಯಸುತ್ತಾನೆ[15], ಮತ್ತು ಅವರಿಗೆ ಮತ್ತು ಇತರ ಪಶ್ಚಾತ್ತಾಪಪಡದ ಪಾಪಿಗಳಿಗೆ ಖಂಡಿತವಾಗಿ ಆಗುವ ಅದೇ ಕೆಟ್ಟ, ನಿರಂತರ ಪಾಡು ನಿಮಗೂ ಆಗುವಂತೆ ನೀವು ಸಲಿಂಗ ವಿವಾಹಗಳಿಗೆ ಮತ ಹಾಕಬೇಕೆಂಬುದು ಅವನ ಬಯಕೆಯಾಗಿದೆ.[16]

ನಾವು ಸೈತಾನನೊಂದಿಗೆ ಯುದ್ಧದಲ್ಲಿದ್ದೇವೆ. ಅವನು ನಿಮ್ಮ ಆತ್ಮವನ್ನು ಮತ್ತು ಎಲ್ಲರ ಆತ್ಮಗಳನ್ನು ನಾಶ ಮಾಡಲು ನೋಡುತ್ತಿದ್ದಾನೆ.[17] ದೇವರು ನಿಮ್ಮನ್ನು ಬಿಟ್ಟುಬಿಡಬೇಕೆಂದು ನೀವು ಬಯಸುವುದಾದರೆ, ನಿಮಗಾಗಿ ಹೋರಾಡಲು ದೇವರನ್ನು ಕೇಳಿಕೊಳ್ಳುವ ಮೂಲಕ ನೀವು ಹೋರಾಡಬೇಕು, ಏಕೆಂದರೆ ದೇವರು ನಿಮಗಾಗಿ ಹೋರಾಡದಿದ್ದರೆ, ನಿಮಗೆ ಇಷ್ಟವಿರಲಿ, ಇಲ್ಲದಿರಲಿ, ನೀವು ಗೆಲ್ಲುವುದಿಲ್ಲ. ನಿಮಗಾಗಿ ಹೋರಾಡಲು ನೀವು ದೇವರನ್ನು ಕೇಳಿಕೊಳ್ಳುತ್ತೀರಿ ಅಥವಾ ಕೇಳಿಕೊಳ್ಳುವುದಿಲ್ಲ, ಎರಡರಲ್ಲಿ ಒಂದು. ಪುನಃ, ದೇವರು ನಿಮಗಾಗಿ ಹೋರಾಡದಿದ್ದರೆ, ನೀವು ಗೆಲ್ಲುವುದಿಲ್ಲ. ಬೈಬಲ್ ನಲ್ಲಿ ಪ್ರತಿಯೊಂದು ಯುದ್ಧವನ್ನು ಗೆದ್ದವರು ಮನುಷ್ಯರಲ್ಲ, ದೇವರು. ನೀವು ಒಂದೋ ಸೈತಾನನಿಗಾಗಿ ಹೋರಾಡುವಿರಿ ಅಥವಾ ಸೈತಾನನ ವಿರುದ್ಧ ದೇವರು ನಿಮಗಾಗಿ ಹೋರಾಡುವಂತೆ ಮಾಡುವಿರಿ. ನಡುದಾರಿ ಯಾವುದೂ ಇಲ್ಲ. ಈ ಯುದ್ಧ ನಿಮ್ಮ ಆತ್ಮಕ್ಕಾಗಿ ಆಗಿದೆ, ಮತ್ತು ನೀವು ಒಂದೋ ಗೆಲ್ಲುವಿರಿ, ಇಲ್ಲ ಸೋಲುವಿರಿ. ದೇವರು ನಿಮಗಾಗಿ ಹೋರಾಡಿದರೆ ನೀವು ಗೆಲ್ಲುವಿರಿ. ನೀವು ದೇವರು ಅಥವಾ ಸೈತಾನ, ಪರಲೋಕ ಅಥವಾ ನರಕಗಳಲ್ಲಿ ಯಾವುದಾದರೊಂದನ್ನು ಆರಿಸಿಕೊಳ್ಳಬೇಕು, ಮತ್ತು ಅದು ಪರಲೋಕದಲ್ಲಿ ಅಥವಾ ನರಕದಲ್ಲಿ ನಿರಂತರತೆಗಾಗಿ ನೀವು ಮಾಡುವ ಆಯ್ಕೆಯಾಗಿದೆ.[18] ಈ ಸತ್ಯಾಂಶವನ್ನು ನಿಮ್ಮ ಮನಸ್ಸಿನಿಂದ ಹೊರಹಾಕಲು ನೀವು ಪ್ರಯತ್ನಿಸಬಹುದು, ಆದರೆ ನ್ಯಾಯವಿಚಾರಣೆಯ ದಿನದಂದು, ನೀವು ಇದನ್ನು ಎದುರಿಸುವಿರಿ. ನಿಮಗೆ ಇಷ್ಟವಿರಲಿ, ಇಲ್ಲದಿರಲಿ, ನೀವು ದೇವರ ನ್ಯಾಯಸ್ಥಾನದ [ಅಥವಾ ಆಸನದ] ಎದುರು ನಿಲ್ಲುವಿರಿ, ಮತ್ತು ನಿಮಗೆ ಯಾರೂ ಎಂದೂ ಹೇಳಲಿಲ್ಲ ಎಂದು ನೀವು ಹೇಳಬಾರದು.

ಈ ಲೋಕವು ತುಂಬಾ ಮುಂದಕ್ಕೆ ಹೋಗಿದೆ ಮತ್ತು ಕೆಟ್ಟುಹೋಗಿದೆ. ಖಂಡಿತವಾಗಿಯೂ ಪ್ರಾಯಶ್ಚಿತ್ತದ ದಿನವಿದೆ ಎಂದು ನೀವು ತಿಳಿದುಕೊಳ್ಳಬೇಕೆಂದು ನಾನು ಬಯಸುತ್ತೇನೆ.[19] ಅವರು ಆತನಲ್ಲಿ ತಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟರೆ ದೇವರು ಅತ್ಯಂತ ದುಷ್ಟ ಪಾಪಿಯನ್ನೂ ರಕ್ಷಿಸುತ್ತಾರೆ (ಯೆಶಾಯ 1:18). ನೀವು ದೇವರಲ್ಲಿ ನಿಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟರೆ, ನಿಮ್ಮ ಬದುಕನ್ನು ನಿರ್ಣಾಯಕವಾಗಿ ಬದಲಾಯಿಸಲು ನೀವು ಆತನಿಗೆ ಅವಕಾಶ ನೀಡುವಿರಿ, ದಿನನಿತ್ಯ ನೀವು ಅದನ್ನು ಅನುಸರಿಸುವಿರಿ.[20] ನೀವು ದೇವರ ಪದವನ್ನು ಸೇವಿಸುವಿರಿ, ಅದರಲ್ಲಿ ಮಲಗುವಿರಿ, ಮತ್ತು ಅದನ್ನು ಕುಡಿಯುವಿರಿ, ಮತ್ತು ನೀವು ಅದರ ಬಗ್ಗೆ ಕಪಟರಾಗುವುದಿಲ್ಲ.[21] ಇದು ನಿಮ್ಮ ಶಾಶ್ವತ ಆತ್ಮದ ಬದುಕಿಗಾಗಿಯೇ ಇದೆ. ನಿಮ್ಮನ್ನು ಬದಲಾಯಿಸಿ ನಿಮ್ಮ ಪರವಾಗಿ ನಿಮ್ಮಲ್ಲಿ

(ಪುಟ 8ರಲ್ಲಿ ಮುಂದುವರಿದಿದೆ)

**15** ಆದಿಕಾಂಡ 9:6, ವಿಮೋಚನಕಾಂಡ 20:13, 21:12, ಯಾಜಕಕಾಂಡ 24:17, ಅರಣ್ಯಕಾಂಡ 35:16-21, 30-33, ಧರ್ಮೋಪದೇಶಕಾಂಡ 5:17, ಮತ್ತಾಯ 19:18, ಮಾರ್ಕ 10:19, ರೋಮಾಪುರದವರಿಗೆ 13:9, ಗಲಾತ್ಯದವರಿಗೆ 5:19-21, ಯಾಕೋಬನು 2:11, ಪ್ರಕಟನೆ 22:14-15 **16** ಆದಿಕಾಂಡ 19:1-13, 24-25, ಯಾಜಕಕಾಂಡ 18:22, 20:13, ಧರ್ಮೋಪದೇಶಕಾಂಡ 22:5, 23:17-18, ನ್ಯಾಯಸ್ಥಾಪಕರು 19:22-28, 1 ಅರಸುಗಳು 14:24, 15:11-12, ಯೆಹೆಜ್ಕೇಲನು 16:49-50, ರೋಮಾಪುರದವರಿಗೆ 1:18-32, 1 ಕೊರಿಂಥದವರಿಗೆ 6:9-10, 1 ತಿಮೊಥೆಯನಿಗೆ 1:9-10, 2 ತಿಮೊಥೆಯನಿಗೆ 3:1-5, ಯೂದನು 7 **17** ಆದಿಕಾಂಡ 3:1-6, ಯೆಶಾಯ 14:9-17, ಯೋಹಾನ 8:44, 2 ಕೊರಿಂಥದವರಿಗೆ 4:3-4, 11:13-15, 2 ಥೆಸಲೋನಿಕದವರಿಗೆ 2:3-12, ಪ್ರಕಟನೆ 12:9-10, 12-13, 17:8 **18** ಯೆಹೋಶುವ 24:15, ದಾನಿಯೇಲನು 12:1-3, ಮಾರ್ಕ 16:16, ಲೂಕ 14:15-33, ಯೋಹಾನ 3:14-18, 12:23-26, ರೋಮಾಪುರದವರಿಗೆ 8:35-39, 1 ತಿಮೊಥೆಯನಿಗೆ 6:6-12, 2 ತಿಮೊಥೆಯನಿಗೆ 2:3-5, 2 ಯೋಹಾನ 9 **19** ಮತ್ತಾಯ 7:21-27, 13:37-43, 47-50, 16:27, 25:31-46, ಲೂಕ 13:23-30, ಯೋಹಾನ 12:48, 2 ಕೊರಿಂಥದವರಿಗೆ 5:10, 2 ಥೆಸಲೋನಿಕದವರಿಗೆ 1:4-10, ಇಬ್ರಿಯರಿಗೆ 9:27, 2 ಪೇತ್ರನು 2:4-9, 3:7-14, ಯೂದನು 5-21, ಪ್ರಕಟನೆ 20:11-15, 21:7-8, 24-27, 22:11-20 **20** ಲೂಕ 9:23-25 **21** ಮತ್ತಾಯ 4:4, ಯೋಹಾನ 8:31-32, ಎಫೆಸದವರಿಗೆ 6:11-18, ಕೊಲೊಸ್ಸೆಯವರಿಗೆ 3:16, 2 ಥೆಸಲೋನಿಕದವರಿಗೆ 2:15, 2 ತಿಮೊಥೆಯನಿಗೆ 2:15, 3:14-17, 1 ಪೇತ್ರನು 2:2

## ಘಾನಾ


ಪ್ರೀತಿಯ ಅಚ್ಚುಮೆಚ್ಚಿನ ಪ್ಯಾಸ್ಟರ್ ಟೋನಿ ಅಲಾಮೊ,

ನಮ್ಮ ಪ್ರಭು ಮತ್ತು ಸ್ವಾಮಿಯಾದ ಯೇಸು ಕ್ರಿಸ್ತರ ಹೆಸರಿನಲ್ಲಿ ನಿಮಗೆ ನಮಸ್ಕಾರಗಳು. ನಿಮ್ಮ ಅತ್ಯುತ್ತಮ ಆರೋಗ್ಯದಲ್ಲಿ ಈ ಪತ್ರವು ನಿಮಗೆ ತಲುಪಲಿ. ನೀವು ನಮಗಾಗಿ ಕಳುಹಿಸಿದ ಪ್ಯಾಕೇಜ್ ನಮಗೆ ಸಿಕ್ಕಿತು ಮತ್ತು ನಾವು ಬಹಳ ಕೃತಜ್ಞರಾಗಿದ್ದೇವೆ. ನಾವು ಸುದ್ದಿಪತ್ರಿಕೆಗಳ ಮತ್ತು ದ ಮೆಸ್ಸೈಅ ಪುಸ್ತಕಗಳ ಒಂದು ಬಾಕ್ಸ್ ಪಡೆದೆವು. ನಿಮ್ಮ ಒಳ್ಳೆಯ ಕಾರ್ಯಗಳಿಗಾಗಿ ದೇವರು ನಿಮ್ಮನ್ನು ಸಮೃದ್ಧವಾಗಿ ಅನುಗ್ರಹಿಸಲಿ.

ಪ್ಯಾಸ್ಟರ್ ಟೋನಿ, ಇಲ್ಲಿ ವಿತರಣೆಯು ಭರದಿಂದ ಸಾಗಿದೆ, ಮತ್ತು ನಿಮ್ಮ ಅದ್ಭುತವಾದ ಸುದ್ದಿಪತ್ರಿಕೆಗಳ ಮೂಲಕ ಕ್ರಿಸ್ತರಿಗಾಗಿ ಅನೇಕ ಆತ್ಮಗಳನ್ನು ಗೆಲ್ಲಲಾಗುತ್ತಿದೆ. ಇನ್ನೂರಕ್ಕೂ ಹೆಚ್ಚು ಆತ್ಮಗಳನ್ನು ಗೆಲ್ಲಲಾಗಿದೆ ಮತ್ತು ಕ್ರಿಸ್ತರಿಗಾಗಿ ಇನ್ನೂ ಹೆಚ್ಚಿನ ಆತ್ಮಗಳನ್ನು ಗೆಲ್ಲುವುದನ್ನು ನಾವು ನಿರೀಕ್ಷಿಸುತ್ತೇವೆ. ನಾನು ಎಷ್ಟೋ ಅಂಗಡಿ-ಮುಂಗಟ್ಟುಗಳಿಗೆ ಭೇಟಿ ನೀಡಿದ್ದೇನೆ. ನಾನು ನಿಮ್ಮ ಸುದ್ದಿಪತ್ರಿಕೆಗಳನ್ನು ಹೇಗೆ ವಿತರಿಸುತ್ತೇನೆ ಎಂದು ತೋರಿಸುವ ಕೆಲವು ಭಾವಚಿತ್ರಗಳನ್ನು ಸೇರಿಸಿದ್ದೇನೆ. ಪ್ಯಾಸ್ಟರ್, ಈ ಜನರು ದೇವರ ಪದಕ್ಕಾಗಿ ಹಾತೊರೆಯುತ್ತಿದ್ದಾರೆ, ಮತ್ತು ನಿಮ್ಮ ಸಿ.ಡಿ.ಗಳು ಕೂಡ ಬಹಳ ಸಹಾಯಕವಾಗಬಲ್ಲವು ಎಂದು ನಾನು ಬಲವಾಗಿ ನಂಬಿದ್ದೇನೆ. ನಿಮ್ಮ ಸಾಹಿತ್ಯವನ್ನು ಓದಿದ ನಂತರ ಇತರರಿಗೆ ಕೊಡಲು ಅವುಗಳನ್ನು ಹೊಂದಿರುವವರನ್ನು ಕೇಳಿಕೊಳ್ಳುತ್ತಾ ನಿಮ್ಮ ಸಾಹಿತ್ಯವನ್ನು ಜಾಣ್ಮೆಯಿಂದ ಹಂಚುತ್ತೇವೆ, ಹಾಗಾಗಿ ನಮ್ಮ ಬಳಿ ಇನ್ನೂ ಸುಮಾರು ಸುದ್ದಿಪತ್ರಿಕೆಗಳು ಉಳಿದಿವೆ.

ಪ್ಯಾಸ್ಟರ್ ಟೋನಿ, ನಾವು ಇಪ್ಪತ್ತು ಸದಸ್ಯರ ಒಂದು ತಂಡವಾದ್ದರಿಂದ ನೀವು ನಮಗೆ ಟಿ-ಷರ್ಟ್ ಗಳನ್ನು ಮತ್ತು ಸ್ವೆಟರ್ ಗಳನ್ನು, ಮತ್ತು ಕೆಲವು ಸಿ.ಡಿ.ಗಳನ್ನು ಕಳುಹಿಸಿಕೊಟ್ಟರೆ, ನಾನು ನಿಮಗೆ ಕೃತಜ್ಞನಾಗಿರುತ್ತೇನೆ. ಪ್ಯಾಸ್ಟರ್ ಟೋನಿ, ನಾವು ನಿಮಗಾಗಿ ಮತ್ತು ನಿಮ್ಮ ಮಿನಿಸ್ಟ್ರಿಗಾಗಿ ಪ್ರಾರ್ಥಿಸುವುದನ್ನು ಮುಂದುವರಿಸುತ್ತಿದ್ದೇವೆ. ನೀವು ನಮಗೆ ಸಾಮಗ್ರಿಗಳನ್ನು ಕಳುಹಿಸಿದಾಗ, ದಯವಿಟ್ಟು ನಮಗೆ ಸಾಧ್ಯವಾದಷ್ಟು ಬೇಗ ತಿಳಿಸಿ.

ಡೆನಿಸ್ ಡಿಲನ್ — ಡೊಂಕೊರ್ಕ್ರೊಂ, ಆಫ್ರಾಮ್ ಪ್ಲೇನ್ಸ್, ಘಾನಾ



ಸಹೋದರ ಡೆನಿಸ್ ಡಿಲನ್ ಪ್ಯಾಸ್ಟರ್ ಅಲಾಮೊ ಅವರ ಆತ್ಮ-ಗೆಲ್ಲುವ ಸಾಹಿತ್ಯ ಮತ್ತು ಮೆಸ್ಸೈಅ ಪುಸ್ತಕಗಳನ್ನು ಘಾನಾದ ಡೊಂಕೊರ್ಕ್ರೊಂನಲ್ಲಿ ಹಂಚುತ್ತಿರುವುದು

## ಕ್ಯಾಲಿಫೋರ್ನಿಯಾ

ಪ್ರೀತಿಯ ಪ್ಯಾಸ್ಟರ್ ಟೋನಿ,

ಮೇ 7, 2013 ರಂದು ಬದುಕಿನ ಪದದ ಅವಶ್ಯಕತೆ ಇದ್ದ ಒಬ್ಬ ಮಹಿಳೆಯ ಬಳಿ ಪ್ರಭು ನನ್ನನ್ನು ಒಯ್ದರು. ಕ್ಯಾಲಿಫೋರ್ನಿಯಾದ ಗ್ಲೆನ್ಡೇಲ್ ನ ಒಂದು ವಾಹನ ನಿಲ್ದಾಣ ಪ್ಲಾಜಾದಲ್ಲಿ ನಾನು ನಿಮ್ಮ ಸುದ್ದಿಪತ್ರಿಕೆಯಾದ “ಆತ್ಮಹತ್ಯೆ ಒಂದು ಪಾಪ”ವನ್ನು ಹಂಚುವಂತೆ ಪ್ರಭುವು ಮಾಡಿದ್ದರು, ಈ ಹಿಂದೆ ಅಸಂಖ್ಯಾತ ಬಾರಿ ನಾನು ಇಲ್ಲಿ ಹಂಚಿದ್ದೇನೆ. ಲೆಕ್ಸಸ್ ಎಸ್ಯುವಿ ಯಲ್ಲಿ ಕುಳಿತಿದ್ದ ಒಬ್ಬ ಮಹಿಳೆಗೆ “ಆತ್ಮಹತ್ಯೆ ಒಂದು ಪಾಪ” ವನ್ನು ನೀಡುವಂತೆ ಪ್ರಭುವು ನನ್ನನ್ನು ನಡೆಸಿದರು; ಆಕೆಯ ಹೆಸರು ಜ್ಯಾಕೀ ಆಗಿತ್ತು. ನಾನು ಆಕೆಗೆ ದೇವರ ಪದವನ್ನು ಕೊಟ್ಟು ಮುಂದಿನ ಕಾರ್ ಬಳಿ ಹೋಗಲಿದ್ದಾಗ, “ನೀವು ಯಾರು?” ಎಂಬುದು ನನಗೆ ಕೇಳಿಬಂತು. ನಾನು ಯೇಸು ಕ್ರಿಸ್ತರ ಶಿಷ್ಯ ಎಂದು ನಾನು ಹೇಳಿದೆನು. “ಇದು ಅತಿ ವಾಸ್ತವಿಕತೆ. ಇದು ನಿಜವೇ? ನಾನು ನಾಳೆ ಮನೆಗೆ ಬರುವುದಿಲ್ಲ ಎಂದು ಹೇಳಲು ನನ್ನ ಕುಟುಂಬಕ್ಕೆ ಕರೆ ಮಾಡಲಿದ್ದೆ. ನಾನು ಫ್ರೀವೇಯಿಂದ ಕೆಳಕ್ಕೆ ಹಾರಲಿದ್ದೆ” ಎಂದು ಆಕೆ ಹೇಳಿದರು. ತನಗೆ ಅಂತಿಮಘಟ್ಟದ ಕ್ಯಾನ್ಸರ್ ಇದ್ದು, ಆ ಕ್ಯಾನ್ಸರ್ ತನ್ನ ಸೊಂಟದ ಮೂಳೆಯನ್ನು ಕೊರೆದ ಕಾರಣ ಸೊಂಟದ ರಿಪ್ಲೇಸ್ಮೆಂಟ್ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕಾಯಿತು, ಮತ್ತು ತಾನು ಈಗಾಗಲೆ ಸತ್ತುಹೋಗಿದ್ದೇನೋ ಎಂಬಂತೆ ತನ್ನ ಕುಟುಂಬದ ಸದಸ್ಯರು ತನ್ನನ್ನು ಕೊಳ್ಳೆ ಹೊಡೆಯುತ್ತಿದ್ದಾರೆ ಎಂದು ಆಕೆ ನನಗೆ ಹೇಳಿದರು. ಅದು ಸಾಲದೆಂದು, ಆಕೆಯ ಗೆಳೆಯ ಆಕೆಯನ್ನು ಬಿಟ್ಟು ಆಕೆ ಸಾಯುವ ಸ್ಥಿತಿಯಲ್ಲಿದ್ದಾಗ ಹಣಕ್ಕಾಗಿ ಬೇರೊಬ್ಬರನ್ನು ಮದುವೆಯಾಗಿದ್ದ.

ಏನು ಮಾಡಬೇಕೆಂದು ಆಕೆ ನನ್ನನ್ನು ಕೇಳಿದರು. ಆಕೆಯನ್ನು ಪ್ರೀತಿಸಬಲ್ಲವರು ಕೇವಲ ಪ್ರಭು ಯೇಸು ಕ್ರಿಸ್ತರು ಮಾತ್ರ, ಮತ್ತು ಪ್ರಭು ಆಕೆಯ ಮೊರೆಗಳನ್ನು ಕೇಳಿ ಆಕೆಯನ್ನು ನರಕದಿಂದ ರಕ್ಷಿಸಿ ಆಕೆಗೆ ಒಂದು ಹೊಸ ಬದುಕನ್ನು ಕೊಡಲು ಬಯಸಿದ್ದಾರೆ ಎಂದು ನಾನು ಆಕೆಗೆ ಹೇಳಿದೆನು. ನಾವು ಪಾಪಿಗಳ ಪ್ರಾರ್ಥನೆಯನ್ನು ಜೊತೆಯಾಗಿ ಪ್ರಾರ್ಥಿಸಿದೆವು ಮತ್ತು ಇನ್ನೂ ಹಲವಾರು ನಿಮಿಷಗಳವರೆಗೆ ಪ್ರಾರ್ಥಿಸಿದೆವು. ಅದರ ನಂತರ ಆಕೆಗೆ ಬಹಳ ನೆಮ್ಮದಿಯಾಯಿತು. ನಂತರ ಆಕೆ ನನಗೆ ಹಣ ನೀಡಿದರು, ಆದರೆ ಅದನ್ನು ನಿರಾಕರಿಸಬೇಕೆಂದು ಆತ್ಮವು ನನಗೆ ಹೇಳಿತು.

ಪ್ರಭುವು ನನ್ನನ್ನು ಬಳಸಲು ಪ್ರಾರಂಭಿಸಲು ಸಾಧ್ಯವಾಗಲು ಆತ ನನ್ನನ್ನು ನನ್ನ ಕುಟುಂಬದಿಂದ ಹೇಗೆ ದೂರ ಮಾಡಬೇಕಾಯಿತು, ಮತ್ತು ಅದನ್ನು ನಾನು ಮೊದಲು ನಂಬಲೇ ಇಲ್ಲ, ಆದರೆ, ದೇವರ ಪದ ನಿಜವೆಂಬುದನ್ನು ದೃಢೀಕರಿಸಿದ, ದೇವರು ನನಗಾಗಿ ಮಾಡಿದ್ದೆಲ್ಲದುದರ ಕಾರಣ ನಾನು ಈಗ ಅದನ್ನು ನಂಬುತ್ತೇನೆ ಎಂದು ನನ್ನ ಕೆಲವು ವೈಯಕ್ತಿಕ ಸಾಕ್ಷಿಗಳನ್ನು ಆಕೆಗೆ ಹೇಳಿದೆನು.

ನನ್ನ ಸಾಕ್ಷಿ ಆಕೆಗೆ ಸಮಾಧಾನ ತಂದ ಹಾಗಿತ್ತು. ಆಕೆ ಇತರ ನಂಬುವವರೊಂದಿಗೆ ಸೇರಬೇಕು ಎಂದು ನಾನು ಜ್ಯಾಕೀಗೆ ಹೇಳಿದೆನು ಮತ್ತು ಆಕೆಯನ್ನು ಪ್ರಾರ್ಥನಾ ಸಭೆಗಳಿಗೆ ಆಹ್ವಾನಿಸಿದೆನು.

ದೇವರಿಗೆ ಜಯವಾಗಲಿ. ಪ್ರಭುವನ್ನು ಸ್ತುತಿಸಿ.

ಡೇವಿಡ್ ಪಾಮಿಸಾನೊ

## ಫಿಲಿಪೀನ್ಸ್

ಪ್ರೀತಿಯ ಸುವಾರ್ತಾಬೋಧಕರಾದ ಟೋನಿ ಅಲಾಮೊ,

ನಾನು ಸರ್ಕಾರಿ ಕಚೇರಿಯಲ್ಲಿ ಉದ್ಯೋಗ ಮಾಡುತ್ತಿರುವ ಏಳು ಮಕ್ಕಳ ಉದ್ಯೋಗಸ್ಥ ತಾಯಿ. ನನ್ನ ಉದ್ಯೋಗದಲ್ಲಿ ನನಗೆ ಅಷ್ಟು ಹೆಚ್ಚು ಸಂಬಳ ಸಿಗುವುದಿಲ್ಲ, ಮತ್ತು ನನ್ನ ಆದಾಯ ಹೆಚ್ಚಿಸಲು, ನಾನು ಕಚೇರಿಯಲ್ಲಿ ನನ್ನ ಸಹೋದ್ಯೋಗಿಗಳಿಗೆ ಆಹಾರ, ಬಿಸ್ಕಿಟ್, ಮತ್ತು ಸ್ಯಾಂಡ್ವಿಚ್ ಸ್ಯಾಂಡ್ವಿಚ್ ಗಳಂಥ ಸಾಮಾನುಗಳನ್ನು ಮಾರಾಟ ಮಾಡುತ್ತೇನೆ. ಕಳೆದ ವರ್ಷದಿಂದ ಬದುಕು ಕಷ್ಟವಾಗಿದೆ, ವಿಶೇಷವಾಗಿ, ಡಿಸೆಂಬರ್ 2012 ರ ಮಧ್ಯದಲ್ಲಿ, ಮಿಂಡನಾವ್ ಪ್ರಾಂತದಲ್ಲಿ ನಮ್ಮ ಮನೆಗೆ ಪ್ರವಾಹ, ಭೂಕುಸಿತಗಳಿಂದ ಹಾನಿಯುಂಟಾಯಿತು, ಮತ್ತು ನಮ್ಮ ಮನೆ ಮತ್ತು ನಮ್ಮ ಬೆಳೆಗಳನ್ನು ನಾಶಗೊಳಿಸಿತು. ನನ್ನ ವಯಸ್ಸಾದ ತಂದೆಯವರು ಸುರಕ್ಷತೆಗಾಗಿ ನಮ್ಮ ಮನೆಯ ಹೊರಗೆ ಓಡಿಹೋಗಲು ಸಾಧ್ಯವಾದುದು ಒಳ್ಳೆಯದಾಯಿತು, ಇಲ್ಲವಾದರೆ ನಮ್ಮ ಮನೆಯ ಛಾವಣಿ ಬಿದ್ದಾಗ ಆತ ಸಾವಿಗೀಡಾಗುತ್ತಿದ್ದರು.

ಆದ್ದರಿಂದ ನನ್ನ ಗಂಡ ಮತ್ತು ನಾನು ನನ್ನ ವಿಧುರ ತಂದೆಗೆ ಅಕ್ಕಿ, ಕ್ಯಾನ್ ಮಾಡಲಾದ ಸಾಮಾನುಗಳು, ಮತ್ತು ಬಟ್ಟೆಗಳನ್ನು ತರಲು ಪ್ರಾಂತದಲ್ಲಿದ್ದ ಮನೆಗೆ ಹೋದೆವು. ನಮ್ಮ ಮನೆಯಲ್ಲಿ ಉಳಿದಿದ್ದವರು ಆತ ಮಾತ್ರ ಮತ್ತು ಆ ಅನುಭವ ಅವರನ್ನು ನಿಬ್ಬೆರಗುಗೊಳಿಸಿತ್ತು. ಅದು ನಮ್ಮ ಬದುಕಿನಲ್ಲಿ ಅತ್ಯಂತ ದುಃಖಕರ ಕ್ರಿಸ್ಮಸ್ ಗಳಲ್ಲಿ ಒಂದಾಗಿತ್ತು ಮತ್ತು 2013 ರ ಹೊಸ ವರ್ಷವನ್ನು ನಾವು ಕತ್ತಲೆಯಲ್ಲಿ ಸ್ವಾಗತಿಸಿದೆವು (ವಿದ್ಯುಚ್ಛಕ್ತಿ ಇಲ್ಲದೆ).

ಆದ್ದರಿಂದ ನಾವು ವಾಪಸಾದಾಗ, ನನ್ನ ತಂದೆಯನ್ನು ನಗರದಲ್ಲಿರುವ ನಮ್ಮ ಮನೆಗೆ ಕರೆತರಲು ನಾನು ನಿರ್ಧರಿಸಿದೆನು. ಮೊದಲಿಗೆ ಆತ ಏಕಾಂಗಿತನದಿಂದ ಕೊರಗಿದರು, ತನ್ನ ಗಿಡಗಳು, ಸಾಕುಕೋಳಿ, ಹಂದಿಗಳು, ಕ್ಯಾರಬೌ ಇಲ್ಲವಲ್ಲ ಎಂದು ಬಹಳ ನೊಂದುಕೊಂಡರು, ಆದರೆ ಬದುಕು ಸಾಗಲೇಬೇಕು. ನನಗೆ ಉದ್ಯೋಗವಿದೆ ಮತ್ತು ನನ್ನ ಕುಟುಂಬಕ್ಕಾಗಿ ನಾನು ಬಲಶಾಲಿಯಾಗಿರಬೇಕು. ನಾವು ಒಬ್ಬರಿಗೊಬ್ಬರು ಸಹಾಯ ಮಾಡುತ್ತೇವೆ.

ನಿಮ್ಮ ಮಾರ್ಗದರ್ಶನ ಮತ್ತು ಪ್ರತಿ ಭಾನುವಾರ ನಿಮ್ಮ ಸಂದೇಶದಿಂದಾಗಿ, ನಿರಂತರ ಬದುಕಿನ ಆತನ ಆಶ್ವಾಸನೆಯ ಮೇಲೆ ಭರವಸೆಯಿಡಬೇಕೆಂದೂ ಮತ್ತು ಏನೇ ಆಗಲಿ, ನಮ್ಮನ್ನು ನೋಡಿಕೊಳ್ಳಲು ಆತ ಯಾವಾಗಲೂ ಇರುತ್ತಾರೆ ಎಂಬ ಆತನ ಭರವಸೆಯಲ್ಲಿ ನಂಬಿಕೆ ಇಡಬೇಕೆಂದೂ ದೇವರು ನಮಗೆ ಹೇಳುತ್ತಿದ್ದಾರೆ ಎಂದು ನಮಗೆ ತಿಳಿದಿದೆ.

ಆತ ನಮಗಾಗಿ ಸದಾ ಇದ್ದಾರೆ ಎಂಬ ದೇವರ ಭರವಸೆಗಳಲ್ಲಿ ನೀವು ಒಬ್ಬರು. ನಮ್ಮ ಕುಟುಂಬಕ್ಕಾಗಿ ಇರುವುದಕ್ಕಾಗಿ ನಿಮಗೆ ಧನ್ಯವಾದಗಳು.

ಸೂಸನ್ ಕೊಮಲಿಂಗ್

ಪಾಸೆ ಸಿಟಿ, ಫಿಲಿಪೀನ್ಸ್

## ಪಾಲ್ ಬೋಲಾಪ್ಪ ಅವರ ಸಾಕ್ಷಿ

*(ಪುಟ 5 ರಿಂದ ಮುಂದುವರಿದಿದೆ)*

ದೃಢಸಂಕಲ್ಪ ಮಾಡಿದೆನು, ಆದರೆ ನನ್ನ ಆತ್ಮಘಾತುಕ ನಡವಳಿಕೆ ಇನ್ನೂ ಹೆಚ್ಚಾಯಿತು.

ಅದಾದ ಸ್ವಲ್ಪ ಸಮಯದ ನಂತರ, ನಾನು ದಕ್ಷಿಣ ಕ್ಯಾಲಿಫೋರ್ನಿಯಾದ ಒಂದು ಹೊಳೆಯ ಹತ್ತಿರವಿದ್ದೆನು. ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿದ್ದವು ಮತ್ತು ಸುಂದರ ಹಸಿರು ಎಲೆಗಳಿದ್ದವು. ನಾನು ಒಂಟಿಯಾಗಿದ್ದೆನು ಮತ್ತು “ಯಾರಾದರೂ ದಯವಿಟ್ಟು ನನಗೆ ಸಹಾಯ ಮಾಡಿ!” ಎಂದು ಕರೆದೆನು, ಅಥವಾ ನಿಜವಾಗಿ ಕೂಗಿದೆನು.

ಮೂರು ದಿನಗಳ ನಂತರ, ನಾನು ಹಾಲಿವುಡ್ ಬೂಲವಾರ್ಡ್ ನಲ್ಲಿ ವಿಂಡೊ ಶಾಪಿಂಗ್ ಮಾಡುತ್ತಿದ್ದೆನು, ಮತ್ತು ಅಳುವಷ್ಟು ಬೇಸರವಾಗಿತ್ತು. ನನ್ನ ಬದುಕಿನಲ್ಲಿ ಸರಿಯಾಗಿ ನಡೆಯುತ್ತಿದ್ದುದು ಒಂದೇ ಒಂದು, ಅದೇನೆಂದರೆ ನನ್ನ ಉದ್ಯೋಗದಲ್ಲಿ ಕೆಲಸ ಮಾಡುವುದು. ನನ್ನ ಉದ್ಯೋಗ ನನಗೆ ಪ್ರಿಯವಾಗಿತ್ತು. ಸೋಮವಾರದಂದು ಪುನಃ ಕೆಲಸಕ್ಕೆ ಹೋಗುವವರೆಗೆ ವಾರಾಂತ್ಯವನ್ನು ಕಳೆಯುವುದು ಹೇಗೆ? ಟೋನಿ ಅಲಾಮೊ ಕ್ರಿಶ್ಚಿಯನ್ ಚರ್ಚ್ ನಿಂದ ಒಬ್ಬ ಸಹೋದರ ನನ್ನ ಬಳಿ ಬಂದರು. “ನಾವು ಶಾಶ್ವತ ಬದುಕನ್ನು ಹೊಂದುವುದು ಸಾಧ್ಯವಾಗುವುದಕ್ಕಾಗಿ ಕ್ರಿಸ್ತರು ಶಿಲುಬೆಯ ಮೇಲೆ ಹೇಗೆ ಸತ್ತರು ಎಂಬುದರ ಬಗ್ಗೆ ಕೇಳಲು ನೀವು ಚರ್ಚ್ ಗೆ ಬರಲು ಇಷ್ಟಪಡುವಿರಾ?” ಎಂದು ಅವರು ಕೇಳಿದರು. ಊಟದ ಬಗ್ಗೆಯೂ ಆತ ಏನೋ ಹೇಳಿದರು, ಮತ್ತು ಆತನ ಪ್ರಸ್ತುತಿ ಪ್ರಾಮಾಣಿಕವಾಗಿತ್ತು ಎಂಬುದು ನನಗೆ ನೆನಪಿದೆ. ನಾನು ಮಾರಾಟದಲ್ಲಿದ್ದುದರಿಂದ, ಒಂದು ಒಳ್ಳೆಯ ಪ್ರಸ್ತುತಿಯನ್ನು ನಾನು ಮೆಚ್ಚಿದೆನು. ಆತನ ಚರ್ಚ್ ಎಲ್ಲಿದೆ ಎಂದು ನಾನು ಕೇಳಿದೆನು. ಅದು ಕ್ಯಾಲಿಫೋರ್ನಿಯಾದ ಸಾಗಸ್ನಿನಲ್ಲಿದೆ ಎಂದು ಆತ ಹೇಳಿದರು. ಅದು ಲ್ಯಾಂಕ್ಯಾಸ್ಟರ್ ಬಳಿ ಇದೆ ಎಂದು ನನಗೆ ಅರಿವಾದಾಗ, ನಾನು ಚರ್ಚಿಗೆ ಹೋದರೆ ವಾರಾಂತ್ಯದ 4 ಅಥವಾ 5 ಗಂಟೆಗಳನ್ನು ಕಳೆಯಲು ಅದು ನನಗೆ ನೆರವಾಗುವುದು ಎಂದು ಯೋಚಿಸಲು ಪ್ರಾರಂಭಿಸಿದೆನು. ಆದ್ದರಿಂದ ನಾನು ಬಸ್ ಹತ್ತಿ ಚರ್ಚಿಗೆ ಹೋದೆನು.

ನಾನು ಅಲ್ಲಿ ತಲುಪಿ ಚರ್ಚ್ ಬಾಗಿಲುಗಳನ್ನು ದಾಟಿ ಹೋದಾಗ ನಿರೀಕ್ಷೆಯ ಒಂದು ಕಿಡಿಯ ಅನುಭವವಾಗಿದ್ದು ನನಗೆ ನೆನಪಿದೆ. ನನ್ನ ಮೊದಲನೆಯ ಭೇಟಿಯಲ್ಲಿ ನಾನು ರಕ್ಷಣೆಯನ್ನು ಹೊಂದಲಿಲ್ಲ, ಆದರೆ ಸತತ ಎರಡು ವಾರಗಳ ವರೆಗೆ ಪ್ರಾರ್ಥನಾ ಸಭೆಗಳಿಗೆ ಬಂದೆನು. ಕೊನೆಗೆ, ನಾನು ನನ್ನ ಜಗ್ಗದ ಮೊಣಕಾಲುಗಳನ್ನು ಬಗ್ಗಿಸಿದೆನು ಮತ್ತು ಭವ್ಯವಾಗಿ ರಕ್ಷಣೆ ಹೊಂದಿದೆನು. ಒಂದು ದೊಡ್ಡ ಭಾರವನ್ನು ನನ್ನ ಮೇಲಿನಿಂದ ಇಳಿಸಿದಂತಾಯಿತು. ಆ ಅಪರಾಧಿ ಭಾವನೆ ಮತ್ತು ನೋವು ಈಗ ಇರಲಿಲ್ಲ, ಮತ್ತು ಇಷ್ಟು ವರ್ಷಗಳವರೆಗೆ ಇಲ್ಲದಿದ್ದ ಒಂದು ಸ್ಪಷ್ಟತೆಯ ಅನುಭವವಾಯಿತು. ನಾನು ಕ್ರಿಸ್ತ ಯೇಸುವಿನಲ್ಲಿ ಹೊಸದಾಗಿ ಜನ್ಮ ತಾಳಿದ ಜೀವಿಯಾದೆನು. ಮಾನಸಿಕ ಚಿಕಿತ್ಸೆ ಮತ್ತು ಸ್ವಯಂ-ಸುಧಾರಣಾ ಪುಸ್ತಕಗಳು ಇನ್ನೆಂದಿಗೂ ಗೊಂದಲ ಹುಟ್ಟಿಸುವ ಅಂಶಗಳಾಗಿರಲಿಲ್ಲ. ಸರ್ವಶಕ್ತನಾದ ಸೃಷ್ಟಿಕರ್ತನೊಂದಿಗೆ ನನಗೆ ಒಂದು ವೈಯಕ್ತಿಕ ಸಂಬಂಧ ಬೆಳೆದಿತ್ತು. ನನ್ನ ಸುತ್ತ ಶಾಂತಿ ಇತ್ತು. ಪ್ರಭುವು ಅತ್ಯಂತ ಪ್ರೀತಿಯ, ಪೋಷಿಸುವ, ಜೋಪಾನದ ಪರಿಸರದಲ್ಲಿ ನನ್ನನ್ನು ಇರಿಸಿದ್ದರು. ಇಲ್ಲಿ ನಾನು 28 ವರ್ಷಗಳಿಂದ ಬೆಳೆದಿದ್ದೇನೆ ಮತ್ತು ಪ್ರಭು ಯೇಸು ಕ್ರಿಸ್ತರನ್ನು ತಿಳಿದುಕೊಂಡಿದ್ದೇನೆ.

ಇಷ್ಟು ವರ್ಷಗಳಿಂದ ನನ್ನ ಆಧ್ಯಾತ್ಮಿಕ ತಂದೆಯಾಗಿದ್ದುದಕ್ಕೆ, ಪ್ಯಾಸ್ಟರ್ ಟೋನಿ, ನಿಮಗೆ ಧನ್ಯವಾದಗಳು.

# ಅಗಾಧ ದುಷ್ಟತನ

*(ಪುಟ 6 ರಿಂದ ಮುಂದುವರಿದಿದೆ)*

ವಾಸಿಸಲು ದೇವರಿಗೆ ಅವಕಾಶ ನೀಡುವುದು ನಿಮ್ಮ ಬಯಕೆಯಾಗಿದ್ದರೆ, ಈ ಪ್ರಾರ್ಥನೆಯನ್ನು ಹೇಳುವ ಮೂಲಕ ಆತನೊಂದಿಗೆ ಪ್ರಾರಂಭಿಸಿ:

ನನ್ನ ಪ್ರಭುವೇ ಮತ್ತು ನನ್ನ ದೇವರೇ, ಪಾಪಿಯಾದ ನನ್ನ ಮೇಲೆ ಕರುಣೆ ತೋರಿ.[22] ಯೇಸು ಕ್ರಿಸ್ತರು ಜೀವಸ್ವರೂಪನಾದ ದೇವರ ಮಗನು ಎಂದು ನಾನು ನಂಬಿದ್ದೇನೆ.[23] ನನ್ನ ಹಿಂದಿನ ಎಲ್ಲಾ ಪಾಪಗಳನ್ನು ಕ್ಷಮಿಸುವುದಕ್ಕಾಗಿ ಆತ ಶಿಲುಬೆಯಲ್ಲಿ ಮರಣ ಹೊಂದಿದನು ಮತ್ತು ತನ್ನ ಅಮೂಲ್ಯ ರಕ್ತವನ್ನು ಸುರಿಸಿದನು ಎಂದು ನಾನು ನಂಬಿದ್ದೇನೆ.[24] ದೇವರು ಪವಿತ್ರಾತ್ಮನ ಶಕ್ತಿಯಿಂದ ಯೇಸುವನ್ನು ಸತ್ತವರಿಂದ ಪುನರುತ್ಥಾನಗೊಳಿಸಿದರು,[25] ಮತ್ತು ಈ ಗಳಿಗೆಯಲ್ಲಿ ನನ್ನ ಪಾಪನಿವೇದನೆಯನ್ನು ಮತ್ತು ಈ ಪ್ರಾರ್ಥನೆಯನ್ನು ಕೇಳುತ್ತಾ ಆತ ದೇವರ ಬಲಗಡೆಯಲ್ಲಿ ಕುಳಿತಿದ್ದಾನೆ ಎಂದು ನಾನು ನಂಬಿದ್ದೇನೆ.[26] ಪ್ರಭು ಯೇಸುವೇ, ನಾನು ನನ್ನ ಹೃದಯದ ಬಾಗಿಲನ್ನು ತೆರೆದು ನಿಮ್ಮನ್ನು ನನ್ನ ಹೃದಯದೊಳಗೆ ಆಮಂತ್ರಿಸುತ್ತೇನೆ.[27] ಕಾಲ್ವಾರಿಯಲ್ಲಿ ಶಿಲುಬೆಯ ಮೇಲೆ ನನ್ನ ಜಾಗದಲ್ಲಿ ನೀವು ಸುರಿಸಿದ ಅಮೂಲ್ಯ ರಕ್ತದಲ್ಲಿ ನನ್ನ ಎಲ್ಲಾ ಹೊಲಸು ಪಾಪಗಳನ್ನು ತೊಳೆದುಬಿಡಿ.[28] ನೀವು ನನ್ನನ್ನು ತಿರಸ್ಕರಿಸುವುದಿಲ್ಲ, ಪ್ರಭು ಯೇಸುವೇ; ನೀವು ನನ್ನ ಪಾಪಗಳನ್ನು ಕ್ಷಮಿಸುವಿರಿ ಮತ್ತು ನನ್ನ ಆತ್ಮವನ್ನು ರಕ್ಷಿಸುವಿರಿ. ನನಗೆ ಗೊತ್ತು ಏಕೆಂದರೆ ನಿಮ್ಮ ಪದವಾದ ಬೈಬಲ್ ಹೀಗೆಂದು ಹೇಳುತ್ತದೆ.[29] ನೀವು ಯಾರನ್ನೂ ತಿರಸ್ಕರಿಸುವುದಿಲ್ಲ ಎಂದು ನಿಮ್ಮ ಪದ ಹೇಳುತ್ತದೆ, ಮತ್ತು ಅದರಲ್ಲಿ ನಾನೂ ಸೇರಿದ್ದೇನೆ.[30] ಆದ್ದರಿಂದ ನೀವು ನನ್ನ ಮಾತು ಕೇಳಿಸಿಕೊಂಡಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನೀವು ನನಗೆ ಉತ್ತರಿಸಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನಾನು ರಕ್ಷಣೆ ಹೊಂದಿದ್ದೇನೆ ಎಂದು ನನಗೆ ತಿಳಿದಿದೆ.[31] ನನ್ನ ಆತ್ಮವನ್ನು ರಕ್ಷಣೆ ಮಾಡಿದ್ದಕ್ಕಾಗಿ, ಪ್ರಭು ಯೇಸುವೇ, ನಾನು ನಿಮಗೆ ಕೃತಜ್ಞನು, ಮತ್ತು ನೀವು ಆದೇಶಿಸಿದಂತೆ ನಡೆದುಕೊಂಡು ಇನ್ನು ಮುಂದೆ ಪಾಪ ಮಾಡದೆ ನಾನು ನನ್ನ ಕೃತಜ್ಞತೆಯನ್ನು ತೋರಿಸುತ್ತೇನೆ.[32]

ರಕ್ಷಣೆಯ ನಂತರ, ಯೇಸುವು ತಂದೆಯ, ಮಗನ, ಮತ್ತು ಪವಿತ್ರಾತ್ಮದ ಹೆಸರಿನಲ್ಲಿ, ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ, ದೀಕ್ಷಾಸ್ನಾನ ಮಾಡಿದರೆಂದು ಹೇಳಲಾಗುತ್ತದೆ.[33] ಬೈಬಲ್ ಸೊಸೈಟಿ ಆಫ್ ಇಂಡಿಯಾದ 'ಸತ್ಯವೇದವು" [ಇಂಗ್ಲಿಷ್‌ನ ಕೆಜೆವಿ] ಬೈಬಲ್ ಅನ್ನು ಓದಿ, ಮತ್ತು ನೀವು ಸಾಯುವ ತನಕ ಅದು ಹೇಳಿದ್ದನ್ನು ಮಾಡಿ.[34]

ರಕ್ಷಣೆಯ ಬಗ್ಗೆ ನೀವು ಇತರರಿಗೆ ತಿಳಿಸಬೇಕೆಂದು ಪ್ರಭು ಬಯಸುತ್ತಾರೆ (ಮಾರ್ಕ 16:15). ನೀವು ಪ್ಯಾಸ್ಟರ್ ಟೋನಿ ಅಲಾಮೊ ಅವರ ಸುವಾರ್ತೆಯ ಸಾಹಿತ್ಯದ ವಿತರಕರಾಗಬಹುದು. ನಾವು ನಿಮಗೆ ಸಾಹಿತ್ಯವನ್ನು ಯಾವುದೇ ಶುಲ್ಕವಿಲ್ಲದೆ ಕಳುಹಿಸುತ್ತೇವೆ. ಹೆಚ್ಚಿನ ಮಾಹಿತಿಗಾಗಿ ನಮಗೆ ಕರೆಮಾಡಿ ಅಥವಾ ಇಮೇಲ್ ಮಾಡಿ. ಈ ಸಂದೇಶವನ್ನು ಬೇರೆಯವರೊಂದಿಗೆ ಹಂಚಿಕೊಳ್ಳಿ.

ನಾವು ಪಾಸ್ಟರ್ ಅಲಾಮೊ ಅವರ ಸಾಹಿತ್ಯವನ್ನು ಅನೇಕ ಭಾಷೆಗಳಲ್ಲಿ ಮುದ್ರಿಸುತ್ತೇವೆ, ಮತ್ತು ಪ್ರಂಪಚದೆಲ್ಲೆಡೆ ಕಳುಹಿಸುತ್ತೇವೆ. ನಾವು ಮುದ್ರಣ ಕಾಗದ ಮತ್ತು ಶಿಪ್ಪಿಂಗ್ ಗಾಗಿ ಅನೇಕ ಮಿಲಿಯ ಡಾಲರುಗಳನ್ನುವ್ಯಯಿಸುತ್ತೇವೆ, ಹಾಗಾಗಿ ನಮಗೆ ನಿಮ್ಮ ಪ್ರಾರ್ಥನೆ ಮತ್ತು ಆರ್ಥಿಕ ಸಹಾಯದ ಅಗತ್ಯವಿದೆ.

ಜಗತ್ತು ರಕ್ಷಣೆ ಪಡೆಯಬೇಕೆಂದು ನೀವು ಬಯಸಿದರೆ ಯೇಸು ಆದೇಶಿಸುವಂತೆ, ದೇವರಿಂದ ಆತನ ದಶಾಂಶಗಳನ್ನು ಮತ್ತು ಕೊಡುಗೆಗಳನ್ನು ಕದ್ದುಕೊಳ್ಳಬೇಡಿ. ದೇವರು ಹೀಗೆ ಹೇಳಿದರು, "ನರಮನುಷ್ಯನು ದೇವರಿಂದ ಕದ್ದುಕೊಳ್ಳಬಹುದೇ? ನೀವಾದರೋ ನನ್ನಿಂದ ಕದ್ದುಕೊಳ್ಳುತ್ತಿದ್ದೀರಿ. ನಿನ್ನಿಂದ ಏನು ಕದ್ದುಕೊಂಡಿದ್ದೀರಿ ಎಂದು ಕೇಳುತ್ತೀರೋ? ದಶಾಂಶ ನನಗೋಸ್ಕರ ಪ್ರತ್ಯೇಕಿಸಬೇಕಾದ ಪದಾರ್ಥ, ಇವುಗಳನ್ನೇ. ನೀವು ಅಂದರೆ ಈ ಜನಾಂಗದವರೆಲ್ಲಾ [ಮತ್ತು ಈ ಸಂಪೂರ್ಣ ಜಗತ್ತು] ನನ್ನಿಂದ ಕದ್ದುಕೊಳ್ಳುವವರಾದ ಕಾರಣ ಶಾಪಗ್ರಸ್ತರಾಗಿದ್ದೀರಿ. ನನ್ನ ಆಲಯವು [ರಕ್ಷಣೆ ಹೊಂದಿರುವ ಆತ್ಮಗಳು] ಆಹಾರಶೂನ್ಯವಾಗದಂತೆ [ಆಧ್ಯಾತ್ಮಿಕ ಆಹಾರ] ನೀವು ದಶಾಂಶವನ್ನು [ದಶಾಂಶ ಎಂದರೆ ನಿಮ್ಮ ಒಟ್ಟು ಆದಾಯದ 10%] ಯಾವತ್ತೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ. ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು, ಅದು ನಿಮ್ಮ ಭೂಮಿಯ ಫಲವನ್ನು ನಾಶ ಮಾಡದು; ನಿಮ್ಮ ದ್ರಾಕ್ಷಿಯ ಹಣ್ಣು ತೋಟದಲ್ಲಿ ಉದುರಿಹೋಗದಂತಾಗುವುದು; ಇದು ಸೇನಾಧೀಶ್ವರ ಯೆಹೋವನ ನುಡಿ. ಆಗ ಸಕಲ ಜನಾಂಗಗಳವರು ನಿಮ್ಮನ್ನು ಧನ್ಯರೆಂದು ಕೊಂಡಾಡುವರು; ನಿಮ್ಮ ದೇಶವು ಆನಂದವಾಗಿರುವದು; ಇದು ಸೇನಾಧೀಶ್ವರ ಯೆಹೋವನ ನುಡಿ" (ಮಲಾಕಿಯ 3:8-12).

---

**22** ಕೀರ್ತನೆಗಳು 51:5, ರೋಮಾಪುರದವರಿಗೆ 3:10-12, 23 **23** ಮತ್ತಾಯ 26:63-64, 27:54, ಲೂಕ 1:30-33, ಯೋಹಾನ 9:35-37, ರೋಮಾಪುರದವರಿಗೆ 1:3-4 **24** ಅಪೊಸ್ತಲರ ಕೃತ್ಯಗಳು 4:12, 20:28, ರೋಮಾಪುರದವರಿಗೆ 3:25, 1 ಯೋಹಾನ 1:7, ಪ್ರಕಟನೆ 5:9 **25** ಕೀರ್ತನೆಗಳು 16:9-10, ಮತ್ತಾಯ 28:5-7, ಮಾರ್ಕ 16:9, 12, 14, ಯೋಹಾನ 2:19, 21, 10:17-18, 11:25, ಅಪೊಸ್ತಲರ ಕೃತ್ಯಗಳು 2:24, 3:15, ರೋಮಾಪುರದವರಿಗೆ 8:11, 1 ಕೊರಿಂಥದವರಿಗೆ 15:3-7 **26** ಲೂಕ 22:69, ಅಪೊಸ್ತಲರ ಕೃತ್ಯಗಳು 2:25-36, ಇಬ್ರಿಯರಿಗೆ 10:12-13 **27** 1 ಕೊರಿಂಥದವರಿಗೆ 3:16, ಪ್ರಕಟನೆ 3:20 **28** ಎಫೆಸದವರಿಗೆ 2:13-22, ಇಬ್ರಿಯರಿಗೆ 9:22, 13:12, 20-21, 1 ಯೋಹಾನ 1:7, ಪ್ರಕಟನೆ 1:5, 7:14 **29** ಮತ್ತಾಯ 26:28, ಅಪೊಸ್ತಲರ ಕೃತ್ಯಗಳು 2:21, 4:12, ಎಫೆಸದವರಿಗೆ 1:7, ಕೊಲೊಸ್ಸೆಯವರಿಗೆ 1:14 **30** ಮತ್ತಾಯ 21:22, ಯೋಹಾನ 6:35, 37-40, ರೋಮಾಪುರದವರಿಗೆ 10:13 **31** ಇಬ್ರಿಯರಿಗೆ 11:6 **32** ಯೋಹಾನ 5:14, 8:11, ರೋಮಾಪುರದವರಿಗೆ 6:4, 1 ಕೊರಿಂಥದವರಿಗೆ 15:10, ಪ್ರಕಟನೆ 7:14, 22:14 **33** ಮತ್ತಾಯ 28:18-20, ಯೋಹಾನ 3:5, ಅಪೊಸ್ತಲರ ಕೃತ್ಯಗಳು 2:38, 19:3-5 **34** ಧರ್ಮೋಪದೇಶಕಾಂಡ 4:29, 13:4, 26:16, ಯೆಹೋಶುವ 1:8, 22:5, 2 ತಿಮೊಥೆಯನಿಗೆ 2:15, 3:14-17, ಯಾಕೋಬನು 1:22-25, ಪ್ರಕಟನೆ 3:18

---

ಹೆಚ್ಚಿನ ಮಾಹಿತಿಗಾಗಿ ಅಥವಾ ಆಸಕ್ತಿಕರವಾಗಿರಬಹುದಾದ ಇತರ ವಿಷಯಗಳ ಬಗ್ಗೆ ಸಾಹಿತ್ಯಕ್ಕಾಗಿ ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

**Tony Alamo, World Pastor, Tony Alamo Christian Ministries Worldwide • P.O. Box 2948, Hollywood, CA 90078**

**24 ಗಂಟೆಗಳ ಪ್ರಾರ್ಥನೆಯ ಸಹಾಯವಾಣಿ: +1 (661) 252-5686 • Fax +1 (661) 252-4362**

**www.alamoministries.com • info@alamoministries.com**

ತಮ್ಮ ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಬಲದಿಂದ ಪ್ರಭುವಿನ ಸೇವೆ ಮಾಡಲು ನಿಜವಾಗಿಯೂ ಬಯಸುವ ನಮ್ಮ ಎಲ್ಲಾ ಯು.ಎಸ್. ತಾಣಗಳಲ್ಲಿರುವವರಿಗೆ ಬದುಕಿಗೆ ಅಗತ್ಯವಾದ ಎಲ್ಲಾ ಸೌಕರ್ಯಗಳೊಂದಿಗೆ ವಾಸಿಸಲು ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರೀಸ್ ವರ್ಲ್ಡ್‌ವೈಡ್ ಸ್ಥಳ ಒದಗಿಸುತ್ತದೆ.

ನ್ಯೂ ಯಾರ್ಕ್ ನಗರದಲ್ಲಿ ಪ್ರತಿ ಮಂಗಳವಾರ ಸಂಜೆ 8 ಗಂಟೆಗೆ ಮತ್ತು ಇತರ ಸ್ಥಳಗಳಲ್ಲಿ ರಾತ್ರಿ ವೇಳೆ ಪ್ರಾರ್ಥನಾ ಸಭೆಯನ್ನು ನಡೆಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕೆಳಗಿನ ಸಂಖ್ಯೆಗೆ ಕರೆ ಮಾಡಿ. (908) 937-5723.

333ಕ್ಕೂ ಹೆಚ್ಚಿನ ಭವಿಷ್ಯವಾಣಿಗಳಲ್ಲಿ ಹಳೆ ಒಡಂಬಡಿಕೆಯಿಂದ ಕ್ರಿಸ್ತರನ್ನು ತೋರಿಸುವ ಪ್ಯಾಸ್ಟರ್ ಅಲಾಮೊ ಅವರ, ದ ಮೆಸ್ಸಾಯ, ಪುಸ್ತಕವನ್ನು ಕೇಳಿ ಪಡೆಯಿರಿ.

*ಲಾಸ್ ಏಂಜಲಿಸ್ ಚರ್ಚ್ ಪ್ರದೇಶ:* 13136 *ಸಿಯೆರಾ ಹೈವೇ, ಸಾಂಟಾ ಕ್ಲಾರಿಟಾ, ಕ್ಯಾಲಿಫೋರ್ನಿಯಾ* 91390 (661) 251-9424 *ದಲ್ಲಿ ಪ್ರತಿ ಸಂಜೆ* 8 *ಗಂಟೆಗೆ ಮತ್ತು ಭಾನುವಾರದಂದು ಮಧ್ಯಾಹ್ನ* 3 *ಗಂಟೆಗೆ ಮತ್ತು ರಾತ್ರಿ* 8 *ಗಂಟೆಗೆ ಪ್ರಾರ್ಥನಾ ಸಭೆಯನ್ನು ನಡೆಸಲಾಗುವುದು.*

*ಉಚಿತ ವಾಹನ ಸೇವೆಯನ್ನು ಹಾಲಿವುಡ್ ಬೂಲೆವಾರ್ಡ್ ಮತ್ತು ಹೈಲ್ಯಾಂಡ್ ಅವೆನ್ಯೂ, ಹಾಲಿವುಡ್, ಕ್ಯಾಲಿಫೋರ್ನಿಯಾದ ಮೂಲೆಯಿಂದ ಪ್ರತಿ ಸಂಜೆ* 6.30 *ಕ್ಕೆ, ಭಾನುವಾರಗಳಂದು ಮಧ್ಯಾಹ್ನ* 1.30 *ಕ್ಕೆ ಮತ್ತು ಸಂಜೆ* 6.30 *ಕ್ಕೆ ಒದಗಿಸಲಾಗುವುದು.*

*ಪ್ರತಿಯೊಂದು ಪ್ರಾರ್ಥನಾ ಸಭೆಯ ನಂತರ ಊಟದ ವ್ಯವಸ್ಥೆ ಮಾಡಲಾಗುವುದು.*

ಈ ಸಾಹಿತ್ಯವು ರಕ್ಷಣೆಯ ನಿಜವಾದ ಯೋಜನೆಯನ್ನು ಹೊಂದಿದೆ (ಅಪೊಸ್ತಲರ ಕೃತ್ಯಗಳು 4:12).

ಇದನ್ನು ಬಿಸಾಡಬೇಡಿ, ಬೇರೆ ಯಾರಿಗಾದರೂ ಕೊಡಿ.

ಇತರ ದೇಶಗಳಲ್ಲಿರುವವರೇ, ಈ ಸಾಹಿತ್ಯವನ್ನು ನಿಮ್ಮ ಸ್ಥಳೀಯ ಭಾಷೆಗೆ ಭಾಷಾಂತರಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.

ನೀವು ಮರುಮುದ್ರಣ ಮಾಡುವುದೇ ಆದಲ್ಲಿ, ದಯವಿಟ್ಟು ಈ ಕೃತಿಸ್ವಾಮ್ಯ ಮತ್ತು ನೋಂದಣಿಯನ್ನು ಸೇರಿಸಿ:

© Copyright July 2013, 2015 All rights reserved World Pastor Tony Alamo ® Registered July 2013, 2015

KANNADA—VOLUME 18000—*OVERWHELMING WICKEDNESS*